CC-O. In Public Domain. Digitized by eGangotri

ಋಷಿಗಳ ತಪೋಧಾಮ ಶೃಂಗೇರಿ

ಕನ್ನಡನಾಡಿನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವ ಸುಂದರವಾದ ಪುಟ್ಟ ಊರು ಶೃಂಗೇರಿ. ಇದು ಭಾರತೀಯ ರೆಲ್ಲರಿಗೂ ಪವಿತ್ರವಾದ ಸ್ಥಳ. ಪಶ್ಚಿಮ ಘಟ್ಟಗಳ ಸಾಲಿನಲ್ಲಿರುವ ಸಹ್ಯಾದ್ರಿ ಪರ್ವತ ಪಙ್ತ್ತಿಯ ತಪ್ಪಲಲ್ಲಿದೆ ಈ ಊರು. ಇದರ ಸುತ್ತಮುತ್ತಲೂ ಬೆಟ್ಟಗುಡ್ಡಗಳು ಹಬ್ಬಿ ನಿಂತಿವೆ. ಮಳೆಗಾಲದಲ್ಲಿ ನೀರ್ದುಂಬಿ ಹರಿಯುವ ತೊರೆಗಳೂ ಸಣ್ಣ ಪುಟ್ಟ ಹಳ್ಳಗಳೂ ಇವೆ. ಸದಾ ಹಸಿರಿನಿಂದ ತುಂಬಿ ಕಂಗೊಳಿಸುವ ರಮ್ಯವಾದ ಅರಣ್ಯಗಳಿವೆ. ಜುಳು ಜುಳು ಹರಿಯುವ ತುಂಗಾನದಿಯ ನೀರು ತುಂಬಾ ರುಚಿಕರವಾಗಿದ್ದು 'ಗಂಗಾ ಸ್ನಾನ, ತುಂಗಾ ಪಾನ' ಎಂಬ ನಾಣ್ಣುಡಿಯನ್ನು ನೆನಪಿಗೆ ತರುತ್ತದೆ.

ಇಲ್ಲಿಯೇ ಮಹರ್ಷಿ ವಿಭಾಂಡಕರೂ ಅವರ ಮಗ ಋಷ್ಯಶೃಂಗ ಋಷಿಯೂ ತಪಸ್ಸು ಮಾಡಿದುದು. ಸನಾತನ ಧರ್ಮ ಪ್ರಸಾರಕ್ಕಾಗಿ ಶ್ರೀ ಶಂಕರಾಚಾರ್ಯರು ಇಲ್ಲಿಯೇ ಮೊದಲ ದಕ್ಷಿಣಾಮ್ನಾಯ ಪೀಠವನ್ನು ಸ್ಥಾಪಿಸಿದುದು. ಜಗದ್ವಿಖ್ಯಾತರಾದ ಶ್ರೀ ವಿದ್ಯಾರಣ್ಯರು ಕರ್ನಾಟಕ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಾಮ್ರಾಜ್ಯ ಸ್ಥಾಪನೆಗಾಗಿ ಸಂಕಲ್ಪ ಮಾಡಿದುದು ಈ ಶೃಂಗೇರಿಯಲ್ಲಿಯೇ. ಶೈವ, ವೈಷ್ಣವ, ಶಾಕ್ತ ಮುಂತಾದ ಭಿನ್ನ ಭಿನ್ನ ಮತಗಳ ಐಕ್ಯತೆಗಾಗಿ ಸನಾತನ ಹಿಂದೂ ಧರ್ಮದ ಉದ್ಧಾರಕ್ಕಾಗಿ ಮಹಾ ಯೋಗಿಗಳು ತಪಸ್ಸು ಮಾಡಿದುದೂ, ಕೃತಿಶೀಲರಾದುದೂ ಈ ಪಾವನ ಕ್ಷೇತ್ರದಲ್ಲಿಯೇ.

ನಮ್ಮ ಭಾರತ ದೇಶ ಅತ್ಯಂತ ಪುಣ್ಯಭೂಮಿ. ಇಲ್ಲಿ ಪ್ರತಿಯೊಂದು ಚೂರು ನೆಲವೂ ಮಹಾತ್ಮರ ಪಾದ ಧೂಳಿಯಿಂದ ಪವಿತ್ರವಾಗಿದೆ. ನಮ್ಮ ದೇಶದಲ್ಲಿ ನದಿಗಳು ಹುಟ್ಟುವ ಸ್ಥಳಗಳು, ಅವು ಹರಿಯುವ ಪ್ರದೇಶಗಳು, ಪರ್ವತ, ಅರಣ್ಯ, ಸಮುದ್ರತೀರ ಇವುಗಳಿಗೆ ಹೆಚ್ಚಿನ ಮಹತ್ವವಿದೆ. ಪ್ರಪಂಚದ ಇತರ ದೇಶಗಳಲ್ಲಿ, ಇಂತಹ ಸ್ಥಳಗಳು ವಿಲಾಸಿಗಳ ವಿಹಾರ ಕೇಂದ್ರವಾಗಿರುತ್ತವೆ, ಪ್ರವಾಸಿಗಳ ಆರಾಮಧಾಮವಾಗಿರುತ್ತವೆ, ಕ್ರೀಡಾಗಾರಗಳಾಗಿರುತ್ತವೆ.

ನಮ್ಮ ದೇಶದಲ್ಲಿ ಈ ಸ್ಥಳಗಳು ಧಾರ್ಮಿಕ ಪ್ರಯೋಗ ಶಾಲೆಗಳಾಗಿವೆ. ಆಧ್ಯಾತ್ಮಿಕ ಸಾಧನೆಯ ಕೇಂದ್ರಗಳಾಗಿವೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಗುಜರಾತಿನಿಂದ ಅಸ್ಸಾಮಿನವರೆಗೆ ಸ್ಥಾಪಿಸಿರುವ ಈ ಪುಣ್ಯಕ್ಷೇತ್ರಗಳು ಮಹಾತ್ಮರ ತಪೋಧಾಮಗಳಾಗಿದ್ದು, ಭಕ್ತಿ, ಜ್ಞಾನ, ವೈರಾಗ್ಯಗಳ ಉಗಮಸ್ಥಾನಗಳಾಗಿವೆ.

ಇಲ್ಲಿಯೇ [illegible] ಗಳನ್ನು ಮೊತ್ತ

Sri Vidyabharathi Book Centre, Sringeri

CC-O. In Public Domain. Digitized by eGangotri



ಮೊದಲಿಗೆ ಹಾಡಿದುದು ; ಶಾಸ್ತ್ರಗಳನ್ನು ಸೃಷ್ಟಿಸಿದುದು ; ಇತಿಹಾಸಗಳನ್ನು ಬರೆದುದು; ಕಾವ್ಯ, ನಾಟಕ, ಸಾಹಿತ್ಯಗಳನ್ನು ರಚಿಸಿದುದು. ಈ ಪವಿತ್ರ ಸ್ಥಳಗಳಲ್ಲಿ. ಎಲ್ಲ ವಿದ್ಯೆಗಳನ್ನು

Sri Vidyabharathi Book Centre, Sringeri

CC-0. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



ತುಂಗಾ ನದಿ, ಸ್ನಾನಘಟ್ಟ, ಪಾಠಶಾಲೆ ಮತ್ತು ವಿದ್ಯಾಶಂಕರ ದೇವಾಲಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲಿಸುವ ವಿದ್ವಾಂಸರಿರುತ್ತಿದ್ದರು. ನಗರಗಳಿಂದ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು. ಯಾವ ಭೇದವೂ ಇಲ್ಲದೆ, ಋಷಿಕುಮಾರರಂತೆ ತಾವೂ ನಾರುಬಟ್ಟೆಯನ್ನು ಉಟ್ಟು, ಗೆಡ್ಡೆಗೆಣಸುಗಳನ್ನು ಹಣ್ಣುಹಂಪಲುಗಳನ್ನು ತಿಂದು ವಿದ್ಯಾಭ್ಯಾಸ ಮಾಡುತ್ತಿದ್ದರು.

ಈ ಗಿರಿ, ವನ, ನದಿಪ್ರದೇಶಗಳೇ ನಮ್ಮ ದೇಶದ ಜೀವನಾಡಿಯ ಕೇಂದ್ರಗಳಾಗಿದ್ದವು. ಇಂತಹ ಒಂದು ಪವಿತ್ರ ಸ್ಥಳ ಶೃಂಗೇರಿ. ಸನಾತನ ಹಿಂದೂಧರ್ಮದ ಮೇಲೆ ದೇಶದ ಇತಿಹಾಸದ ಮೇಲೆ ತುಂಬಾ ಪ್ರಭಾವವನ್ನು ಬೀರಿದ ಪುಟ್ಟ ಗ್ರಾಮ, ಋಷಿಗಳ ತಪೋಧಾಮ.

ಮಹರ್ಷಿ ವಿಭಾಂಡಕ

ಶೃಂಗೇರಿಗೆ ಈ ಹೆಸರು ಬಂದುದು ಋಷ್ಯಶೃಂಗ ಮಹರ್ಷಿಯಿಂದ. ಋಷ್ಯಶೃಂಗರ ತಂದೆ ಕಶ್ಯಪ ಮಹರ್ಷಿಯ ಮಗ ವಿಭಾಂಡಕರು.

ವಿಭಾಂಡಕರು ಪ್ರಭಾಂಡಕ ಋಷಿಯ ಸಹೋದರರು. ಬಾಲ್ಯದಲ್ಲಿಯೇ ವಿದ್ಯಾಭ್ಯಾಸಕ್ಕೆಂದು ದೂರ ಹೊರಟು ಹೋಗಿದ್ದರು. ಅನೇಕ ವರ್ಷಗಳ ಕಾಲ ವಿದ್ಯಾರ್ಜನೆ ಮಾಡಿ ಆಧ್ಯಾತ್ಮಿಕ ಸಾಧನೆಯನ್ನೂ ನಡೆಸಿದ್ದರು. ಅನಂತರ ವಿಭಾಂಡಕರು ತಮ್ಮ ಅಣ್ಣ ಪ್ರಭಾಂಡಕರು ಇದ್ದ ಆಶ್ರಮಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದರು. ತಮ್ಮನನ್ನು ಬಹುಕಾಲದ ನಂತರ ನೋಡಿದ ಅಣ್ಣನಿಗೆ ತುಂಬಾ ಸಂತೋಷವಾಯಿತು. ಆದರೆ ಅಣ್ಣನ ಹೆಂಡತಿ ವಿಭಾಂಡಕರನ್ನು ವಿಶ್ವಾಸದಿಂದ ಕಾಣಲಿಲ್ಲ. ತಮ್ಮಿಬ್ಬರ ಸುಖಜೀವನದಲ್ಲಿ ಇವನೊಬ್ಬ ಬಂದನಲ್ಲಾ ಎಂದು ಆಕೆ ಅಸಹನೆಯನ್ನು ತೋರಿಸಿದಳು.

ವಿಭಾಂಡಕರಿಗೆ ಅತ್ತಿಗೆಯ ವರ್ತನೆಯಿಂದ ತುಂಬಾ ದುಃಖವಾಯಿತು. ಮನಸ್ಸಿಗೆ ನೋವಾದ ಮೇಲೆ ಅಲ್ಲಿರ ಬಾರದೆಂದು ನಿಶ್ಚಯಿಸಿದರು. ಅಣ್ಣನ ಆಶ್ರಮವನ್ನು ಬಿಟ್ಟು ದೂರ ದೂರ ಹೊರಟುಹೋದರು. ತಾವೇ ಆಶ್ರಮ ವೊಂದನ್ನು ಕಟ್ಟಿಕೊಂಡು, ಅಲ್ಲಿಯೇ ತಪಸ್ಸು ಮಾಡಿ ಕೊಂಡು ಇದ್ದುಬಿಟ್ಟರು. ಯಾರ ಸಂಪರ್ಕವೂ ಇಲ್ಲದೆ ಎಷ್ಟೋ ವರ್ಷ ಕಾಲ ಒಂಟಿಯಾಗಿಯೇ ಇದ್ದರು.

ವಿಭಾಂಡಕರ ಶಾಂತ ಜೀವನವನ್ನು ದೇವಲೋಕದ ಅಪ್ಸರೆ ಊರ್ವಶಿಯು ಕಲಕಿದಳು. ತನ್ನನ್ನು ವಿವಾಹ ಮಾಡಿಕೊಳ್ಳಬೇಕೆಂದು ಅವರನ್ನು ಕೇಳಿಕೊಂಡಳು. ವಿಭಾಂಡಕರು ಒಪ್ಪಲಿಲ್ಲ. ಅವಳು ಪದೇ ಪದೇ ಬಂದು ಬೇಡಿಕೊಂಡುದದರಿಂದ, ಪರಿಪರಿಯಾಗಿ ಪ್ರಾರ್ಥನೆ ಮಾಡಿದುದರಿಂದ ವಿಭಾಂಡಕರು ಊರ್ವಶಿಯನ್ನು ವಿವಾಹ ವಾದರು. ಸ್ವಲ್ಪ ಕಾಲಾನಂತರ ಇವರಿಗೆ ಗಂಡು ಮಗು ವೊಂದು ಜನಿಸಿತು. ಆ ಮಗುವಿನ ತಲೆಯ ಮೇಲೆ ಜಿಂಕೆಯ ಕೊಂಬಿನಂತೆ, ಸಣ್ಣ ಗುರುತೊಂದು ಇತ್ತು. ಆ ಮಗುವೇ ಋಷ್ಯಶೃಂಗ. ಮಗುವು ಭಾಗ್ಯಶಾಲಿಯೂ,

Sri Vidyabharathi Book Centre, Sringeri

CC-O. In Public Domain. Digitized by eGangotri

ತಪಸ್ವಿಯೂ, ಲೋಕಕಾರುಣ್ಯವುಳ್ಳವನೂ ಆಗುತ್ತಾನೆಂದು ತಿಳಿದ ವಿಭಾಂಡಕರು ತುಂಬಾ ಹರ್ಷಪಟ್ಟರು.

ಮಗುವು ಹುಟ್ಟಿದ ಸ್ವಲ್ಪ ದಿನಕ್ಕೆಲ್ಲಾ ಊರ್ವಶಿ ಸ್ವರ್ಗಕ್ಕೆ ಹೊರಟು ಹೋದಳು. ಪುಟ್ಟ ಮಗುವಿನ ಲಾಲನೆ ಪಾಲನೆ ಎಲ್ಲವೂ ವಿಭಾಂಡಕರ ಪಾಲಿಗೇ ಬಂದಿತು.

ಅತ್ತಿಗೆಯ ಮತ್ಸರ ಸ್ವಭಾವ, ಸ್ವರ್ಗಲೋಕದ ಊರ್ವಶಿಯ ಚಂಚಲ ಸ್ವಭಾವ ಮತ್ತು ನಿರ್ಮಮತೆ, ಇವುಗಳಿಂದ ನೊಂದ ವಿಭಾಂಡಕರು ಸ್ತ್ರೀಯರೆಲ್ಲಾ ಕೆಟ್ಟವರೇ ಇರಬೇಕೆಂದು ಭಾವಿಸಿಬಿಟ್ಟರು. ತಮ್ಮ ಮಗನು ಸ್ತ್ರೀ ಸಂಪರ್ಕವೇ ಇಲ್ಲದೆ ಬೆಳೆಯಬೇಕೆಂದು ನಿರ್ಧರಿಸಿದರು. ಹಾಗೆಯೇ ತಮ್ಮ ಹಟವನ್ನು ಸಾಧಿಸಿಯೂ ಬಿಟ್ಟರು.

ಋಷ್ಯಶೃಂಗ ಮಹರ್ಷಿ

ಬಾಲ ಋಷ್ಯಶೃಂಗನಿಗೆ ತಂದೆಯೇ ವಿದ್ಯಾಭ್ಯಾಸ ಮಾಡಿಸಿದರು. ತಮ್ಮ ಪ್ರತಿಜ್ಞೆಯಂತೆ ಯಾವ ಸ್ತ್ರೀಯೂ ಆಶ್ರಮದ ಹತ್ತಿರಕ್ಕೆ ಬಾರದಂತೆ ಕಟ್ಟುಪಾಡು ಮಾಡಿದ್ದ ವಿಭಾಂಡಕರು, ಕೇವಲ ವಟುಗಳನ್ನು ಮಾತ್ರ ಆಶ್ರಮಕ್ಕೆ ಸೇರಿಸುತ್ತಿದ್ದರು. ತುಂಬಾ ಬುದ್ಧಿವಂತನೂ, ಸೂಕ್ಷ್ಮಬುದ್ಧಿಯುಳ್ಳವನೂ ಆದ ಋಷ್ಯಶೃಂಗನು ಬಲುಬೇಗ ವೇದಶಾಸ್ತ್ರಗಳನ್ನೆಲ್ಲಾ ಕಲಿತುಬಿಟ್ಟನು. ತಂದೆಯ ಆಶ್ರಮಕ್ಕೆ ಬರುತ್ತಿದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಇತರ ಋಷಿಗಳೂ ವಿದ್ವಾಂಸರೂ ಋಷ್ಯಶೃಂಗನ ಒಳ್ಳೆಯ ನಡತೆ, ಮೃದುಮಾತು, ನಮ್ರಸ್ವಭಾವ, ಅತಿಥಿ ಸತ್ಕಾರ ಇವನ್ನೆಲ್ಲ ಮೆಚ್ಚಿಕೊಂಡು ಹರಸುತ್ತಿದ್ದರು. ವಟು ಋಷ್ಯ ಶೃಂಗನೂ ತಂದೆಯಂತೆಯೇ ತಾನೂ ತಪಸ್ಸನ್ನು ಯೋಗಾ ಭ್ಯಾಸವನ್ನೂ ಮಾಡುತ್ತಿದ್ದನು.

ತಂದೆ ವಿಭಾಂಡಕರು ತಾವೇ ತಾಯಿಯೂ ತಂದೆಯೂ ಆಗಿ ಮಗನನ್ನು ಸಾಕಿದ್ದರಷ್ಟೆ. ಆಶ್ರಮದಲ್ಲಿದ್ದವರೆಲ್ಲಾ ಗಂಡಸರೇ ಆಗಿದ್ದು ಸ್ತ್ರೀಯರು ಯಾರೂ ಅಲ್ಲಿ ಇರಲಿಲ್ಲ. ವಿಭಾಂಡಕರಿಗೆ ಹೆಂಗಸರೆಂದರೆ ಅಸಮಾಧಾನವೂ ಅಸಹನೆಯೂ ಇದ್ದುದರಿಂದ, ಅವರ ಆಶ್ರಮಕ್ಕೆ ಋಷಿ ಪತ್ನಿಯರಾರೂ ಬರುತ್ತಿರಲಿಲ್ಲ. ಹೀಗಾಗಿ ಋಷ್ಯಶೃಂಗರು ಬೆಳೆದದ್ದು ಗಂಡುಬೀಡಿನಲ್ಲಿ. ಅವರಿಗೆ ಋಷಿಗಳು, ಋಷಿ ಕುಮಾರರು ವಿನಾ ಋಷಿಪತ್ನಿಯರು ಸ್ತ್ರೀಯರು ಇದ್ದಾರೆಂಬ ವಿಚಾರವೇ ತಿಳಿದಿರಲಿಲ್ಲ. ಅಷ್ಟೊಂದು ಮುಗ್ಧ ಸ್ವಭಾವ ಋಷ್ಯಶೃಂಗರದು.

ವಿಭಾಂಡಕರ ಆಶ್ರಮವಿದ್ದ ಅರಣ್ಯಕ್ಕೆ ಹೊಂದಿ ಕೊಂಡು ಅಂಗರಾಜ್ಯವಿತ್ತು. (ಇಂದಿನ ಬಿಹಾರಕ್ಕೆ ಸೇರಿದ ಭಾಗ) ಅಲ್ಲಿಯ ದೊರೆ ರೋಮಪಾದ. ಅವನು ಧರ್ಮ ದಿಂದ ತಪ್ಪಿ ನಡೆದುದರಿಂದ, ಅವನ ರಾಜ್ಯದಲ್ಲಿ ಮಳೆ ಯಾಗಲಿಲ್ಲ; ಬೆಳೆಯಾಗಲಿಲ್ಲ; ಕ್ಷಾಮ ಬಂದಿತು. ಹನ್ನೆರಡು ವರ್ಷಗಳಾದರೂ ಕ್ಷಾಮ ಹೋಗಲಿಲ್ಲ. ಜನ ಕಂಗೆಟ್ಟರು, ಪಶುಪ್ರಾಣಿಗಳೆಲ್ಲ ಸೊರಗಿ ಹೋದುವು. ತಿನ್ನಲು ಆಹಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಲ್ಲ, ಕುಡಿಯಲು ನೀರಿಲ್ಲ, ಕಾಡುಗಳೆಲ್ಲಾ ಒಣಗಿದವು. ಕಾಡಿನ ಪ್ರಾಣಿಗಳು ಆಹಾರವನ್ನು ಅರಸುತ್ತ ಊರಿಗೆ ನುಗ್ಗಿದವು. ಎಲ್ಲಿ ನೋಡಿದರೂ ಹಸಿವು, ನೀರಡಿಕೆ, ಸಂಕಟ, ಸುಸ್ತು. ದೊರೆ ರೋಮಪಾದನು ಜನಗಳ ಈ ಕಷ್ಟವನ್ನು ನೋಡಿ ಚಿಂತಿಸುತ್ತಾ ಕುಳಿತನು.

ಆಗ ಮಹರ್ಷಿಯೊಬ್ಬರು ಬಂದು ಹೇಳಿದರು, "ರೋಮಪಾದ, ನಿನ್ನ ಅಧರ್ಮದಿಂದ ಹೀಗೆ ಅನಾವೃಷ್ಟಿಯಾಗಿ ಕ್ಷಾಮ ಬಂದಿದೆ. ನಿನ್ನ ರಾಜ್ಯಕ್ಕೆ ಹೊಂದಿರುವ ಅರಣ್ಯದಲ್ಲಿ ವಿಭಾಂಡಕರೂ ಅವರ ಮಗ ಋಷ್ಯಶೃಂಗರೂ ತಪಸ್ಸು ಮಾಡುತ್ತಿದ್ದಾರೆ. ಋಷ್ಯಶೃಂಗರು ತುಂಬಾ ಲೋಕ ಕಾರುಣ್ಯವುಳ್ಳವರು. ಅವರನ್ನು ಹೇಗಾದರೂ ಒಲಿಸಿ ಕರೆತಂದರೆ, ನಿನ್ನ ದೇಶದಲ್ಲಿ ಮಳೆಯಾಗಿ ಬೆಳೆಯಾಗುವುದು." ರೋಮಪಾದ ರಾಜನಿಗೆ ಋಷಿಯ ಮಾತು ಕೇಳಿ ಸಂತೋಷವಾಯಿತು. ಆದರೆ ತಾನು ಹೋಗಿ ಹೇಗೆ ಕರೆತರುವುದು? ತನ್ನ ಅಧರ್ಮದಿಂದಲೇ ಅಲ್ಲವೆ ಕ್ಷಾಮ ಬಂದಿರುವುದು? ಹೀಗೆ ಯೋಚಿಸುತ್ತಾ ಕುಳಿತ ದೊರೆಯನ್ನು ಮಗಳು ಶಾಂತೆ ಸಂತಯಿಸಿ ತಾನೇ ಋಷ್ಯಶೃಂಗರನ್ನು ಕರೆತರುವುದಾಗಿ ಭರವಸೆಯಿತ್ತಳು.

ಋಷ್ಯಶೃಂಗರು ಮಳೆ ಸುರಿಸಿದರು

ರೋಮಪಾದನ ಮಗಳು ಶಾಂತೆ ಪ್ರಜಾವತ್ಸಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗಿದ್ದಳು. ಜನಗಳು ಪಡುತ್ತಿದ್ದ ಕಷ್ಟವನ್ನು ಕಂಡು ಅವಳ ಮನಸ್ಸು ಕರಗಿತ್ತು. ಚಿಂತೆಯಿಂದ ಕುಂದಿದ ತಂದೆಯನ್ನು ಒಪ್ಪಿಸಿ ತಾನೇ ತನ್ನ ಸಖಿಯರು ಮತ್ತು ರಾಜನರ್ತಕಿಯರೊಡನೆ ವಿಭಾಂಡಕಾಶ್ರಮಕ್ಕೆ ಹೊರಟಳು.

ಶಾಂತೆ ಋಷಿಪುತ್ರರಂತೆಯೇ ನಾರು ಬಟ್ಟೆಯನ್ನು ಉಟ್ಟಳು. ಅವಳ ಗೆಳತಿಯರೂ ಶಾಂತೆಯನ್ನೇ ಅನುಕರಿಸಿದರು. ಕೂದಲನ್ನು ಗೋಪುರದಂತೆ ಕಟ್ಟಿ ಭಸ್ಮ, ರುದ್ರಾಕ್ಷ ಮಾಲೆಗಳನ್ನು ಧರಿಸಿದ ಶಾಂತೆ ಋಷಿಕನ್ಯೆಯಂತೆ ಕಂಡಳು. ತನ್ನ ದೋಣಿಯನ್ನು ದಡದಲ್ಲಿ ಕಟ್ಟಿಹಾಕಿ, ವಿಭಾಂಡಕಾ ಆಶ್ರಮಕ್ಕೆ ಮೆಲ್ಲನೆ ಬಂದಳು. ಆಗ ವಿಭಾಂಡಕರು ಆಶ್ರಮದಲ್ಲಿ ಇರಲಿಲ್ಲ. ಋಷ್ಯಶೃಂಗರೊಬ್ಬರೇ ಇದ್ದರು. ಶಾಂತೆಯನ್ನೂ ಅವಳ ಸಖಿಯರನ್ನೂ ಕಂಡು ಅವರಿಗೆ ಅಚ್ಚರಿಯಾಯಿತು. 'ಇದೇನು ಈ ಋಷಿಪುತ್ರರು ಹೀಗೆ ಇದ್ದಾರೆ. ಬೇರೆ ಕುಮಾರರಂತೆ ಇಲ್ಲವಲ್ಲಾ ?' ಎಂದುಕೊಂಡರು ಋಷ್ಯಶೃಂಗರು.

ಶಾಂತೆಯನ್ನೂ ಆಕೆಯ ಸಖಿಯರನ್ನೂ ಸ್ವಾಗತಿಸಿದರು. ಆಶ್ರಮದ ರೀತಿಯಂತೆ ಕಾಲು ಕೈ ತೊಳೆಯಲು ನೀರನ್ನಿತ್ತರು. ತಿನ್ನಲು ಪಕ್ವವಾದ ಹಣ್ಣುಗಳನ್ನುಕೊಟ್ಟರು. ಶಾಂತೆಯ ನಡವಳಿಕೆ, ಮಾತು, ಸೌಜನ್ಯ ಇವೆಲ್ಲವನ್ನೂ ಕಂಡ ಋಷ್ಯಶೃಂಗರು ಮುಗ್ಧರಾದರು. ಶಾಂತೆ ತಾವು ಪಕ್ಕದಲ್ಲಿಯೇ ಇರುವ ಋಷ್ಯಾಶ್ರಮಕ್ಕೆ ಸೇರಿದವರೆಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಿದಳು. ತಮ್ಮ ಆಶ್ರಮಕ್ಕೆ ಋಷ್ಯಶೃಂಗರು ಒಮ್ಮೆಯಾದರೂ ಬರಬೇಕೆಂದು ಶಾಂತೆ ಕೇಳಿಕೊಂಡಳು.



ವಿಭಾಂಡಕರ ಅಪ್ಪಣೆಯಿಲ್ಲದೆ ಎಲ್ಲಿಗೂ ಬರುವುದಿಲ್ಲವೆಂದ ಋಷ್ಯಶೃಂಗರು, ಬಹಳ ಬಲವಂತ ಮಾಡಿದ ಮೇಲೆ ಒಪ್ಪಿದರು. ಅವರೊಡನೆಯೇ ಹೊರಟರು. ಶಾಂತೆಯ

Sri Vidyabharathi Book Centre, Sringeri

CC-O. In Public Domain. Digitized by eGangotri



ಸಖಿಯರೇ ಪಾಲಕಿಯನ್ನು ಹೊತ್ತು ಹಾಡುತ್ತ ನಡೆದರು.
ದೋಣಿಯನ್ನು ಶಾಂತೆಯೇ ಸ್ವತಃ ನಡೆಸಿದಳು.
ದೋಣಿ ರೋಮಪಾದನ ನಗರಿಯನ್ನು ತಲುಪುತ್ತಲೇ

Sri Vidyabharathi Book Centre, Sringeri

CC-O. In Public Domain. Digitized by eGangotri

ದೊರೆ ಅವರನ್ನು ಸ್ವಾಗತಿಸಿ ಭಕ್ತಿಯಿಂದ ವಂದಿಸಿದನು. ಋಷ್ಯಶೃಂಗರು ದೋಣಿಯಿಂದ ಇಳಿಯುತ್ತಿದ್ದಂತೆಯೇ ರಾಜನು ತನ್ನ ದೇಶಕ್ಕೆ ಬಂದು ಒದಗಿದ್ದ ಕಷ್ಟವನ್ನು ಹೇಳಿಕೊಂಡು ಪರಿಹಾರವನ್ನು ಬೇಡಿಕೊಂಡನು. ಪರಮ ದಯಾಳುವಾದ ಋಷ್ಯಶೃಂಗರು ಮಳೆ ಸುರಿದು ಸಸ್ಯ ಸಮೃದ್ಧಿಯಾಗಲೆಂದು ಹರಸಿದರು.

ಆಕಾಶದಲ್ಲಿ ಇದ್ದಕ್ಕಿದ್ದಂತೆಯೇ ಮೋಡಗಳು ಸಾಲ್ಗಟ್ಟಿ ನಿಂತವು. ಮಳೆ ಸುರಿಯಲಾರಂಭಿಸಿ, ಜನರೆಲ್ಲಾ ಹರ್ಷೋದ್ಗಾರ ಮಾಡುತ್ತ ಕುಣಿದಾಡಿದರು. ಋಷ್ಯಶೃಂಗರನ್ನು ಮಳೆಯ ಋಷಿಯೆಂದು ಕೊಂಡಾಡಿದರು.

ಋಷ್ಯಶೃಂಗರನ್ನು ಸ್ವಲ್ಪ ಕಾಲ ತನ್ನ ಅರಮನೆಯಲ್ಲಿಯೇ ಅತಿಥಿಯಾಗಿ ಇರಬೇಕೆಂದು ದೊರೆ ಬೇಡಿ ಶಾಂತೆಯು ಋಷ್ಯಶೃಂಗರನ್ನು ವರಿಸಿ ವಿವಾಹವಾದಳು. ಋಷ್ಯಶೃಂಗರು ಸ್ವಲ್ಪ ಕಾಲ ಮಾವನ ಮನೆಯಲ್ಲಿಯೇ ಇದ್ದರು. ಅನಂತರ ರೋಮಪಾದನ ಬಂಧುವಾದ ದಶರಥನ ಕೋರಿಕೆಯಂತೆ ಅಯೋಧ್ಯೆಗೆ ದಯಮಾಡಿಸಿದರು. ಅಲ್ಲಿ ದಶರಥ ಮಹಾರಾಜನಿಂದ ಪುತ್ರಕಾಮೇಷ್ಟಿಯಾಗವನ್ನು ಮಾಡಿಸಿದರು. ಋಷ್ಯಶೃಂಗರ ಆಶೀರ್ವಾದದಿಂದ ದಶರಥನು ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ಪುತ್ರರನ್ನು ಪಡೆದನು.

ಅಯೋಧ್ಯೆಯಿಂದ ಋಷ್ಯಶೃಂಗರು ತಮ್ಮ ಆಶ್ರಮಕ್ಕೆ ಬಂದರು. ಅಲ್ಲಿ ವಿಭಾಂಡಕರು ಇರಲಿಲ್ಲ. ತಂದೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಡುಕಿಕೊಂಡು ಅವರು ಹೊರಟಾಗ ವಿಭಾಂಡಕರು ದಕ್ಷಿಣ ಭಾರತದಲ್ಲಿರುವ ಶೃಂಗೇರಿಯ ಮಲಹಾನಿಕರೇಶ್ವರ ಬೆಟ್ಟದಲ್ಲಿ ತಪಸ್ಸು ಮಾಡುತ್ತಿದ್ದುದು ತಿಳಿಯಿತು. ಶಾಂತೆಯೊಡನೆ ಋಷ್ಯಶೃಂಗರೂ ಶೃಂಗೇರಿಗೆ ಬಂದು ತಂದೆಯ ದರ್ಶನ ಪಡೆದರು. ವೃದ್ಧರಾಗಿದ್ದ ವಿಭಾಂಡಕರನ್ನು ಇಬ್ಬರೂ ಶ್ರದ್ಧೆಯಿಂದ ಸೇವಿಸಿದರು. ಅನಂತರ ಋಷ್ಯಶೃಂಗರೂ ಅವರ ಪತ್ನಿಯೂ ಶೃಂಗೇರಿಯಲ್ಲಿ ಬಹುಕಾಲ ತಪಸ್ಸು ಮಾಡುತ್ತಿದ್ದರು.

ತಮ್ಮ ಕೊನೆಯ ದಿನಗಳನ್ನು ಶೃಂಗೇರಿಗೆ ಸಮೀಪದಲ್ಲಿರುವ ಕಿಗ್ಗ ಎಂಬಲ್ಲಿ ಕಳೆದು, ಅಲ್ಲಿರುವ ಈಶ್ವರಲಿಂಗದಲ್ಲಿ ಋಷ್ಯಶೃಂಗರು ಐಕ್ಯರಾದರು. ಋಷ್ಯಶೃಂಗರು ತಪಸ್ಸು ಮಾಡಿದುದೂ, ಮಂತ್ರ ದ್ರಷ್ಟಾರರಾದುದೂ ಶೃಂಗೇರಿಯಲ್ಲಿಯೇ. ಆದ್ದರಿಂದ ಋಷ್ಯಶೃಂಗರ ಹೆಸರಿನಲ್ಲಿ ಶೃಂಗೇರಿಯು ಋಷ್ಯಶೃಂಗ ಗಿರಿ, ಶೃಂಗಪುರ, ಶೃಂಗಗಿರಿ, ಶೃಂಗೇರಿ ಎಂದಾಯಿತು. ಶೃಂಗೇರಿಯ ಮಧ್ಯದಲ್ಲಿರುವ ಬೆಟ್ಟದ ಮಲಹಾನಿಕರೇಶ್ವರ ಲಿಂಗವೇ ವಿಭಾಂಡಕರು ಐಕ್ಯವಾದ ಸ್ಥಳ.

ಕಪ್ಪೆ ಶಂಕರ

ಶ್ರೀ ಶಂಕರಾಚಾರ್ಯರ ಹೆಸರನ್ನು ಕೇಳದವರಾರು ? ಪ್ರಪಂಚದಲ್ಲೆಲ್ಲಾ ಪ್ರಸಿದ್ಧವಾದುದು ಅವರ ಪುಣ್ಯನಾಮ ಮತ್ತು ಕೀರ್ತಿ.

Sri Vidyabharathi Book Centre, Sringeri

CC-O. In Public Domain. Digitized by eGangotri



ಶೃಂಗೇರಿಯು ಮೊದಲು ಪ್ರಸಿದ್ಧಿ ಪಡೆದುದು ವಿಭಾಂಡಕರ ಮತ್ತು ಋಷ್ಯಶೃಂಗರಿಂದ ಅಲ್ಲವೆ ? ಅನಂತರ ಶೃಂಗೇರಿಯು ನಮ್ಮ ಹಿಂದೂಧರ್ಮದ ಮುಖ್ಯ ಕಾರ್ಯ ಕ್ಷೇತ್ರವಾಗಿ ಪ್ರಸಿದ್ಧವಾಯಿತು. ಈ ಪ್ರಸಿದ್ಧಿಗೆ ಕಾರಣ ಯಾರು ಗೊತ್ತೆ ? ಅವರೇ, ಶ್ರೀ ಶಂಕರರು.

Sri Vidyabharathi Book Centre, Sringeri

CC-O. In Public Domain. Digitized by eGangotri



ಶಂಕರರು ಶೃಂಗೇರಿಯನ್ನು ತಮ್ಮ ಅತ್ಯಂತ ಮುಖ್ಯ ಕಾರ್ಯಕ್ಷೇತ್ರವಾಗಿ ಆರಿಸಿಕೊಂಡುದಕ್ಕೆ ಒಂದು ಐತಿಹ್ಯ ವನ್ನು ಹೇಳುತ್ತಾರೆ. ಅದೇ ಕಪ್ಪೆ ಶಂಕರ ಎಂಬ ಐತಿಹ್ಯ.

ಶಂಕರರು ಸುರೇಶ್ವರರೇ ಮೊದಲಾದ ಶಿಷ್ಯರ ಜೊತೆ ಯಲ್ಲಿ ಧರ್ಮಪೀಠವನ್ನು ಸ್ಥಾಪಿಸಲೂ, ಶಾರದೆಯ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಾನ್ನಿಧ್ಯಕ್ಕೆ ನೆಲೆ ಹುಡುಕಲೂ ಹೊರಟಿದ್ದರು. ಹಾಗೆಯೇ ನಡೆದು ಬರುತ್ತ ಶೃಂಗೇರಿಯ ತುಂಗಾತೀರಕ್ಕೆ ಬಂದರು. ಸುತ್ತಲೂ ತಪಸ್ಸಿಗೆ ಕುಳಿತಿದ್ದ ಋಷಿಗಳಂತೆ ಕಾಣುತ್ತಿದ್ದ ಬೆಟ್ಟಗುಡ್ಡಗಳು, ಹಸಿರಿನಿಂದ ತುಂಬಿದ ಕಾಡುಮೇಡುಗಳು, ಫಲಪುಷ್ಪಗಳಿಂದ ಬಾಗಿದ್ದ ಮರಗಿಡಗಳು, ಇವನ್ನೆಲ್ಲಾ ನೋಡಿ ಶಂಕರರಿಗೆ ಪ್ರಯಾಣದ ದಣಿವೆಲ್ಲಾ ಮಾಯ ವಾಗಿತ್ತು. ತಂಪಾದ ಗಾಳಿ, ಜುಳು ಜುಳು ಹರಿಯುವ ತುಂಗಾನದಿಯ ಪ್ರವಾಹ ಇವು ಅವರಿಗೆ ಹರ್ಷವನ್ನಿತ್ತವು. ಎಲ್ಲಿ ನೋಡಿದರೂ ಕಂಗಳಿಗೆ ತಂಪನ್ನೀಯುವ ಸುಂದರ ದೃಶ್ಯಗಳೇ ಕಾಣುತ್ತಿದ್ದವು. ಈ ಪಾವನ ಕ್ಷೇತ್ರ ಶೃಂಗೇ ರಿಯು ಅವರನ್ನು ತುಂಬಾ ಆಕರ್ಷಿಸಿತು.

ಶಂಕರರು ಸ್ನಾನ ಮಾಡಲೆಂದು ತುಂಗಾನದಿಯಲ್ಲಿ ಇಳಿದರು. ದಡದ ಮೇಲೆ ಒಂದು ವಿಚಿತ್ರ ಕಾಣಿಸಿತು. ಶಂಕರರು ಆಶ್ಚರ್ಯದಿಂದ ಮೂಕರಾಗಿಬಿಟ್ಟರು. ನೀರಿನಲ್ಲಿ ಅರ್ಧ ಮುಳುಗಿದ ಕಲ್ಲು ಬಂಡೆ, ಅದರಲ್ಲಿ ಒಂದು ಸಣ್ಣ ಪೊಟರೆ, ಸ್ವಲ್ಪವೇ ನೀರಿದ್ದ ಪೊಟರೆಯಲ್ಲಿ ಕಪ್ಪೆಯೊಂದು ಕುಳಿತಿತ್ತು. ಅದು ಗರ್ಭಿಣಿಯಾಗಿದ್ದು ಪ್ರಸವವೇದನೆ ಯಿಂದ ಬಳಲುತ್ತಿತ್ತು. ಬಂಡೆಯ ಮೇಲೆ ಹಾದುಹೋಗು ತ್ತಿದ್ದ ನಾಗರಹಾವೊಂದು ಬಿಸಿಲಿನ ಬೇಗೆಯಲ್ಲಿ ತಾಪಪಡು ತ್ತಿದ್ದ ಕಪ್ಪೆಯನ್ನು ನೋಡಿ ತನ್ನ ಹೆಡೆಯನ್ನು ಬಿಚ್ಚಿ ಕಪ್ಪೆಗೆ ನೆಳಲನ್ನು ನೀಡಿತು.

ಈ ದೃಶ್ಯ ಶಂಕರರನ್ನು ಮುಗ್ಧರಾಗಿಸಿತ್ತು. ಸ್ವಭಾವ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಂದ ದೀನವಾದ ಕಪ್ಪೆ, ಉಗ್ರಸ್ವಭಾವದ ಹಾವಿಗೆ ಹೆದರುತ್ತದೆ. ಹಾವುಗಳಲ್ಲಿಯೂ ನಾಗರಹಾವೆಂದರೆ ತುಂಬಾ ಭಯಪಡುತ್ತದೆ. ಹಾವು ಕಪ್ಪೆಯನ್ನು ನುಂಗುವುದೆಂಬುದನ್ನು ಎಲ್ಲರೂ ಬಲ್ಲರಷ್ಟೆ? ಆದರೆ ಈ ಶೃಂಗೇರಿಯ ತುಂಗಾದಡದಲ್ಲಿ ಹಾವು ಕಪ್ಪೆಗೆ ಆಶ್ರಯವನ್ನಿತ್ತು ರಕ್ಷಿಸಿತ್ತು. ಶೃಂಗೇರಿಯು ಪಾವನವಷ್ಟೇ ಅಲ್ಲ, ವೈರವನ್ನೂ ಮರೆಯಿಸಿ, ಭಯವನ್ನು ನಿವಾರಿಸಿ, ಮೈತ್ರಿಯನ್ನು ಮೂಡಿಸುವ ಪುಣ್ಯಕ್ಷೇತ್ರವೆಂದು ಶಂಕರರಿಗೆ ಅನ್ನಿಸಿತು. ತಾವು ಮುಂದೆ ಇಲ್ಲಿಗೆ ಬರಬೇಕು, ಬಂದು ಹಲವು ಕಾಲ ಇಲ್ಲಿ ನೆಲಸಬೇಕು, ತಪಸ್ಸು ಮಾಡಬೇಕು ಎಂದುಕೊಂಡರು ಶಂಕರರು.

ಕಪ್ಪೆಗೆ ಹಾವು ನೆಳಲಿತ್ತ ನೆನಪಿಗಾಗಿ, ತುಂಗಾನದಿಯ ಸ್ನಾನ ಘಟ್ಟದಲ್ಲಿ ಕಪ್ಪೆಶಂಕರ ಎಂಬ ಲಿಂಗವು ಈಗಲೂ ಇದೆ. ಅದರ ಬಳಿಯಲ್ಲಿಯೇ ಕಪ್ಪೆ ಮತ್ತು ಹಾವುಗಳ ಶಿಲ್ಪವೂ ಇದೆ.

ಶೃಂಗೇರಿಯ ಇತಿಹಾಸ

ಶೃಂಗೇರಿಯು ಮೊದಲು ಹೊಯ್ಸಳ ಸಾಮ್ರಾಜ್ಯಕ್ಕೆ ಸೇರಿತ್ತು. ಮಲ್ಲಿಕಾಫರನು ದಕ್ಷಿಣದೇಶದ ಮೇಲೆ ದಂಡೆಯಾತ್ರೆ ಮಾಡಿದಾಗ ಹೊಯ್ಸಳದೇಶವನ್ನು ದಾಳಿಮಾಡಿ ಧ್ವಂಸಮಾಡಿದನು. ಆಗ ಅನೇಕ ಗುಡಿಗೋಪುರಗಳನ್ನು ನಾಶಮಾಡಿದನು. ಆ ಸಮಯದಲ್ಲಿಯೇ ಶೃಂಗೇರಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಠವನ್ನೂ ಶಾರದಾ ದೇವಾಲಯವನ್ನೂ ನಾಶಮಾಡಿದ
ನೆಂಬ ಪ್ರತೀತಿಯುಂಟು. ಆಗ ಶಾರದಾ ದೇವಾಲಯದಲ್ಲಿ
ಇದ್ದ ಗಂಧದ ಶಾರದಾ ವಿಗ್ರಹವನ್ನು ಶತ್ರುಗಳು ಭಿನ್ನ
ಗೊಳಿಸಿದರೆಂದು ಜನ ಹೇಳುವುದುಂಟು.

ಶೃಂಗೇರಿಯ ಇತಿಹಾಸವು ಶ್ರೀ ವಿದ್ಯಾತೀರ್ಥರ
ನಂತರ ಬದಲಾಯಿತು. ಋಷ್ಯಾಶ್ರಮವಾಗಿದ್ದ ಶೃಂಗೇರಿ
ದೇಶವನ್ನು ಕಟ್ಟುವಂತಹ ಕ್ರಾಂತಿವೀರರ ಮಂತ್ರಾಲೋಚ
ನೆಯ ಸ್ಥಳವಾಯಿತು. ವಿದ್ಯಾತೀರ್ಥರ ಶಿಷ್ಯರಾಗಿದ್ದ
ಭಾರತೀತೀರ್ಥ ಮತ್ತು ವಿದ್ಯಾರಣ್ಯರು ಹೊಸ ಸಾಮ್ರಾಜ್ಯ
ಸ್ಥಾಪನೆಮಾಡಲು ತಮ್ಮ ಗುರುಗಳಿಂದ ಆದೇಶವನ್ನು ಪಡೆ
ದಿದ್ದರು. ಹಂಪೆಯಲ್ಲಿದ್ದ ಹಕ್ಕಬುಕ್ಕರು ಆಗಾಗ ಶೃಂಗೇರಿಗೆ
ಬಂದು ಗುರುಗಳ ಸಲಹೆ ಪಡೆಯುತ್ತಿದ್ದರು. ಅನೇಕ ಜನ
ಸಣ್ಣ ಪುಟ್ಟ ಪಾಳೆಯಗಾರರೂ, ರಾಜರೂ ಗುರುಗಳ
ಆದೇಶದಂತೆ ನಡೆಯುತ್ತಿದ್ದರು. ಅನೇಕರು ತಮ್ಮ ನಗ
ನಾಣ್ಯಗಳನ್ನೂ, ಐಶ್ವರ್ಯವನ್ನೂ ತಂದು ಗುರುಗಳಿಗೆ
ಕಾಣಿಕೆಯಾಗಿ ಒಪ್ಪಿಸಿದರು. ಗುರುಗಳು ರಾಷ್ಟ್ರ ನಿರ್ಮಾಣ
ಕ್ಕಾಗಿ ಆ ಐಶ್ವರ್ಯವೆಲ್ಲವನ್ನು ಹಕ್ಕ ಬುಕ್ಕರಿಗೆ ಕೊಟ್ಟು
ಬಿಟ್ಟಿದ್ದರು. ಹೀಗೆ ಶೃಂಗೇರಿಯು ವಿಜಯನಗರ ಸಾಮ್ರಾಜ್ಯ
ಸ್ಥಾಪನೆಗೆ ಕಾರಣವಾಯಿತು.

ವಿಜಯನಗರದ ಚಕ್ರವರ್ತಿಗಳು ಶೃಂಗೇರಿಯ ಗುರು
ಗಳಲ್ಲಿ ತುಂಬಾ ಭಕ್ತಿ ಗೌರವಗಳನ್ನು ಹೊಂದಿದ್ದರು.
ಮೊದಲನೆಯ ಹರಿಹರ, ಬುಕ್ಕರಾಯ, ಇಮ್ಮಡಿ ಹರಿಹರ

Sri Vidyabharathi Book Centre, Sringeri

CC-O. In Public Domain. Digitized by eGangotri

ಇವರು ಶೃಂಗೇರಿಯ ಗುರುಗಳಿಗೂ, ದೇವಾಲಯಗಳಿಗೂ, ಅಲ್ಲಿಯ ನೌಕರರಿಗೂ ಹೇರಳವಾದ ದಾನಗಳನ್ನು ಕೊಟ್ಟರು. ಶೃಂಗೇರಿಯ ಪ್ರಗತಿಯು ವಿಜಯನಗರದ ಪ್ರಗತಿಗೆ ಹೊಂದಿಕೊಂಡು ಬೆಳೆಯಿತು. ಮಠ, ದೇವಾಲಯಗಳು ಹೊಸದಾಗಿ ಕಟ್ಟಿಸಲ್ಪಟ್ಟವು. ವಿದ್ಯೆಯನ್ನು ಕಲಿಯಲು ಬರುವವರ ಸಂಖ್ಯೆ ಬೆಳೆದಂತೆ ಅನೇಕ ಕಟ್ಟಡಗಳೂ ನಿರ್ಮಿತವಾದವು. ಶೃಂಗೇರಿಯು ವಿದ್ಯಾ ಪ್ರಸಾರ ಜ್ಞಾನ ಪ್ರಸಾರ ಕೇಂದ್ರವಾಯಿತು. ಅದೊಂದು ಪುಟ್ಟ ಸ್ವತಂತ್ರ ರಾಜ್ಯವಾಗಿ ಬೆಳೆಯಿತು. ಅದಕ್ಕೆ 'ಶೃಂಗೇರಿ ಮೂರು ಸಾವಿರ ಸೀಮೆ' ಎಂಬ ಹೆಸರು ಬಂದಿತು.

ವಿಜಯನಗರ ಸಾಮ್ರಾಜ್ಯವು ತಾಳಿಕೋಟೆಯ ಯುದ್ಧದಲ್ಲಿ ಅಸ್ತವಾಯಿತಲ್ಲವೆ ? ಅದರೊಡನೆಯೇ ಶೃಂಗೇರಿಯ ಮಠಕ್ಕೂ ಹಲವಾರು ತೊಂದರೆಗಳು ಬಂದವು. ಆ ಸಮಯದಲ್ಲಿ ಇಕ್ಕೇರಿಯ ನಾಯಕರು ಶೃಂಗೇರಿಯ ನೆರವಿಗೆ ಬಂದರು. ವೆಂಕಟಪ್ಪ ನಾಯಕನು ಮಠದ ಕಟ್ಟಡವನ್ನು ವಿಸ್ತರಿಸಿ, ಬ್ರಾಹ್ಮಣರಿಗೆ ವಾಸಕ್ಕಾಗಿ ಅಗ್ರಹಾರವನ್ನು ನಿರ್ಮಿಸಿದನು. ವೀರಭದ್ರನಾಯಕನ ಕಾಲದಲ್ಲಿ ಕಳಸದ ಭೈರವನಿಗೂ ಅವನಿಗೂ ಪರಸ್ಪರ ಕದನ ನಡೆಯಿತು. ಭೈರವನು ಶೃಂಗೇರಿಯನ್ನು ಪದೇ ಪದೇ ಮುತ್ತಿ ದಾಳಿ ಮಾಡಿದನು. ಮಠ ಮಂದಿರಗಳನ್ನು ನಾಶ ಮಾಡಿದನು. ಆ ಸಮಯದಲ್ಲಿ ಮೊದಲನೆಯ ಶ್ರೀ ಸಚ್ಚಿದಾನಂದ ಭಾರತೀಯವರು ಶೃಂಗೇರಿಯ ಗುರುಗಳಾಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನೂ ಚಿಕ್ಕ ವಯಸ್ಸಿನ ಆ ಸ್ವಾಮಿಗಳ ಧೈರ್ಯ, ಸ್ಥೈರ್ಯವು ತುಂಬಾ ಅಪೂರ್ವವಾದುವು. ಭೈರವನ ಆಕ್ರಮಣ ಕಾಲದಲ್ಲಿ, ಗುರುಗಳು ಊರಿನ ಜನಕ್ಕೆಲ್ಲಾ ಮಠದಲ್ಲಿಯೇ ಆಶ್ರಯವನ್ನು ಕೊಟ್ಟಿದ್ದರು. ನಗರ ರಕ್ಷಣೆಗಾಗಿ ಸೂಕ್ತವಾದ ಏರ್ಪಾಡುಗಳನ್ನು ಮಾಡಿದ್ದರು. ಆ ವೇಳೆಗೆ ಸರಿಯಾಗಿ ಇಕ್ಕೇರಿಯ ಸೈನ್ಯವೂ ಬಂದು ಭೈರವನನ್ನು ಸೋಲಿಸಿ ಅಡಗಿಸಿತ್ತು.

ಇಕ್ಕೇರಿಯ ನಾಯಕರು ಮೈಸೂರಿನ ಹೈದರಾಲಿಗೆ ಸೋತ ನಂತರ, ಶೃಂಗೇರಿಯು ಮೈಸೂರು ಒಡೆಯರ ಆಡಳಿತಕ್ಕೆ ಒಳಪಟ್ಟಿತು. ಹೈದರಾಲಿಗೂ ಮರಾಠರಿಗೂ ಆಗಾಗ ಯುದ್ಧವಾಗುತ್ತಿತ್ತು. ಇಂತಹ ಒಂದು ಯುದ್ಧದ ಸಮಯದಲ್ಲಿ ಮರಾಠರ ಸರದಾರ ಪರಶುರಾಮ ಭಾವೂ ಎಂಬಾತನು ಶೃಂಗೇರಿಯನ್ನು ಮುತ್ತಿದನು. ಊರನ್ನೂ ಮಠವನ್ನೂ ಕೊಳ್ಳೆ ಹೊಡೆದನು. ಅಪಾರ ಐಶ್ವರ್ಯವನ್ನು ಅಪಹರಿಸಿದನು. ದೇವತಾಮೂರ್ತಿಗಳನ್ನು ಭಿನ್ನಗೊಳಿಸಿದನು. ಬ್ರಾಹ್ಮಣರನ್ನು ಪ್ರಜಾವರ್ಗದವರನ್ನು ಕೊಂದನು. ಈ ವಿಚಾರವನ್ನು ಕೇಳಿದ ಟಿಪ್ಪುವು ದೇವಸ್ಥಾನದ ಪುನರ್ನಿರ್ಮಾಣಕ್ಕೂ ಕುಂಭಾಭಿಷೇಕಕ್ಕೂ ತಗಲುವ ಹಣವನ್ನೂ ಪದಾರ್ಥಗಳನ್ನೂ ಶೃಂಗೇರಿಗೆ ಕಳುಹಿಸಿದನು. ಶೃಂಗೇರಿಯ ಗುರುಗಳಲ್ಲಿ ಭಕ್ತಿಯನ್ನು ಇಟ್ಟಿದ್ದ ಟಿಪ್ಪುವು "ನಾನು ದೇವರ ದಯೆ, ತಮ್ಮ ಆಶೀರ್ವಾದ ಮತ್ತು ನನ್ನ ಬಾಹುಬಲ ಇವನ್ನು ನಂಬಿದ್ದೇನೆ" ಎಂದು ಬರೆದಿದ್ದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನು ಪ್ರತಿಸಲ ಬ್ರಿಟಿಷರ ಮೇಲೆ ಯುದ್ಧಕ್ಕೆ ಹೊರಡುವಾಗಲೂ ಶೃಂಗೇರಿ ಗುರುಗಳ ಆಶೀರ್ವಾದವನ್ನು ಬೇಡುತ್ತಿದ್ದನು. ಟಿಪ್ಪುವಿನ ನಂತರ ಮೈಸೂರು ಒಡೆಯರು ಶೃಂಗೇರಿಯ ವಿಚಾರದಲ್ಲಿ ಭಕ್ತಿ ಗೌರವದಿಂದ ನಡೆದುಕೊಂಡರು.

ವಿಜಯನಗರದ ಕಾಲದಲ್ಲಿ ಸ್ವತಂತ್ರವಾಗಿ ರೂಪುಗೊಂಡ 'ಶೃಂಗೇರಿ ಸಂಸ್ಥಾನ'ವು ಇಕ್ಕೇರಿಯ ನಾಯಕರ ಕಾಲದಲ್ಲಿಯೂ ಮೈಸೂರು ಒಡೆಯರ ಕಾಲದಲ್ಲಿಯೂ ಹಾಗೆಯೇ ಬೆಳೆದುಬಂದಿತು. ಇತ್ತೀಚಿನ ಪ್ರಜಾಪ್ರಭುತ್ವ ಯುಗದಲ್ಲಿ ಶೃಂಗೇರಿಗೆ ಸೇರಿದ್ದ ಜಹಗೀರನ್ನು ಮೈಸೂರು ಸರ್ಕಾರವು ವಶಪಡಿಸಿಕೊಂಡಿತು.

ಶ್ರೀ ಶಂಕರಾಚಾರ್ಯರು

ಶ್ರೀ ಶಂಕರಾಚಾರ್ಯರು ದೇಶವನ್ನೆಲ್ಲಾ ಸಂಚರಿಸಿದ್ದರೂ ಅವರನ್ನು ಆಕರ್ಷಿಸಿದ ಸ್ಥಳಗಳು ಕೆಲವು ಮಾತ್ರವೇ. ಶೃಂಗೇರಿ ಅಂತಹ ಸ್ಥಳಗಳಲ್ಲಿ ಅಗ್ರಗಣ್ಯವಾಯಿತು. ಉಳಿದ ಸ್ಥಳಗಳೆಂದರೆ ಪುರೀ, ದ್ವಾರಕಾ, ಬದರೀನಾಥ, ಕಾಶಿ ಮತ್ತು ಶಂಕರರು ತಮ್ಮ ಕೊನೆಯ ದಿನಗಳನ್ನು ಕಳೆದ ಕೇದಾರನಾಥ.

ಶಂಕರರು ತಮ್ಮ ಜನ್ಮಸ್ಥಳವಾದ ಕಾಲಟಿಯಲ್ಲಿ ಎಂಟು ವರ್ಷಗಳವರೆಗೆ ಮಾತ್ರ ಇದ್ದರು. ಸ್ವಲ್ಪಕಾಲ

Sri Vidyabharathi Book Centre, Sringeri

CC-O. In Public Domain. Digitized by eGangotri

ನರ್ಮದಾ ನದೀ ತೀರದಲ್ಲಿ ಗೋವಿಂದ ಭಗವತ್ಪಾದರ ಸೇವೆ ಮಾಡುತ್ತಾ ಇದ್ದರು. ಗೋವಿಂದರ ಅಪ್ಪಣೆಯಂತೆ ಕಾಶಿಗೆ



Sri Vidyabharathi Book Centre, Sringeri

ಶೃಂಗೇರಿ ಮಠದಲ್ಲಿರುವ ಶ್ರೀ ಶಂಕರಾಚಾರ್ಯರವರ ಪುರಾತನ ಮೂರ್ತಿ

CC-O. In Public Domain. Digitized by eGangotri

ಹೊರಟರು. ಅಲ್ಲಿ ಹಲವರು ಶಿಷ್ಯರು ಶಂಕರರನ್ನು ಆಶ್ರಯಿಸಿದರು. ಅವರಲ್ಲಿ ಶ್ರೀ ಸನಂದನರು ಮುಖ್ಯರು.



Sri Vidyabharathi Book Centre, Sringeri

ಶೃಂಗೇರಿ ಶ್ರೀ ಶಾರದಾದೇವಿ ಮೂಲವರು ಮತ್ತು ಉತ್ಸವರು

CC-O. In Public Domain. Digitized by eGangotri



ಶೃಂಗೇರಿ ವಿದ್ಯಾಶಂಕರ ದೇವಾಲಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಶಿಯಿಂದ ಬದರೀನಾಥಕ್ಕೆ ಹೋಗಿ ಅಲ್ಲಿಯೇ ಹದಿನಾರು ವರ್ಷ ತುಂಬುವವರೆಗೆ ಇದ್ದರು. ಅಲ್ಲಿ ವ್ಯಾಸ ಗುಹೆಯಲ್ಲಿ ತಪಸ್ಸು ಮಾಡುತ್ತಾ ಅನೇಕ ದೊಡ್ಡ ದೊಡ್ಡ ಪುಸ್ತಕಗಳನ್ನು ಬರೆದರು.

ಬದರೀನಾಥದಿಂದ ದಕ್ಷಿಣಕ್ಕೆ ಹೊರಟ ಶಂಕರರು ಸನಾತನ ಹಿಂದೂಧರ್ಮವನ್ನು ಶುದ್ಧಿಗೊಳಿಸುವ ಕಾರ್ಯ ಮಾಡಿದರು. ಹಿಂದೂಧರ್ಮದಲ್ಲಿ ಅನೇಕ ದುಷ್ಟ ಆಚಾರಗಳು ಸೇರಿಬಿಟ್ಟಿದ್ದವು. ಅದಕ್ಕೆ ಹೊರಗಿನಿಂದ ಅಪಾಯವೂ ಬಂದಿತ್ತು. ಒಳಗಿನ ಅನಾಚಾರ ಹೊರಗಿನ ಟೀಕೆ ಇವುಗಳನ್ನು ಎದುರಿಸಿದ ಶಂಕರರು ಹಿಂದೂಧರ್ಮವನ್ನು ಭದ್ರವಾದ ನೆಲೆಯಲ್ಲಿ ನಿಲ್ಲಿಸಿದರು. ಅನೇಕ ಜನ ಪಂಡಿತರು ಶಂಕರರನ್ನು ಎದುರಿಸಿದರು. ಅವರ ತಪ್ಪನ್ನು ಶಂಕರರು ತಿದ್ದಿ, ಅವರನ್ನೆಲ್ಲಾ ಸರಿಯಾದ ಧರ್ಮಮಾರ್ಗದಲ್ಲಿ ಹೋಗುವಂತೆ ಮಾಡಿದರು. ಅನೇಕ ಜನ ಪಂಡಿತರು ಶಂಕರರ ಶಿಷ್ಯರಾದರು. ಹಾಗೆ ಶಿಷ್ಯರಾದವರಲ್ಲಿ ಮಾಹಿಷ್ಮತೀ ನಗರದ ವಿಶ್ವರೂಪರು (ಮಂಡನ ಮಿಶ್ರ ಎಂಬುದು ಇವರ ಬಿರುದು) ಅವರ ಪತ್ನಿ ಸರಸವಾಣಿಯೂ ಮುಖ್ಯರು. ವಿಶ್ವರೂಪರು ಸನ್ಯಾಸ ಸ್ವೀಕರಿಸಿ ಶ್ರೀ ಸುರೇಶ್ವರ ಎಂಬ ಹೆಸರನ್ನು ಪಡೆದು ಶೃಂಗೇರಿಗೆ ಬಂದರು.

ಶಂಕರರಿಗೆ ಕರ್ನಾಟಕದ ಶ್ರೀ ಬಲಿಗ್ರಾಮದಲ್ಲಿ ದೊರಕಿದ ಇನ್ನೊಬ್ಬ ಶಿಷ್ಯ ಶ್ರೀ ಹಸ್ತಾಮಲಕರು, ಶೃಂಗೇರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿಯೇ ದೊರಕಿದ ಮತ್ತೊಬ್ಬ ಶಿಷ್ಯ ಶ್ರೀ ತೋಟಕಾಚಾರ್ಯರು.

ಶಂಕರರು ತಮ್ಮ ಜೀವನದ ಹೆಚ್ಚು ಕಾಲವನ್ನು ಶೃಂಗೇರಿಯಲ್ಲಿ ಕಳೆದರು. ಇಲ್ಲಿಯೇ ಅನೇಕ ಗ್ರಂಥಗಳನ್ನು ರಚಿಸಿದರು. ಇಲ್ಲಿಂದಲೇ ಅವರು ತಮ್ಮ ತಾಯಿಯ ಸೇವೆಗಾಗಿ ಕಾಲಟಿಗೆ ಹೋದುದು. ತಾಯಿಯವರು ಮೃತರಾದ ನಂತರ ಆಕೆಯ ಉತ್ತರಕ್ರಿಯೆಯನ್ನು ಮುಗಿಸಿ, ಶಂಕರರು ಶೃಂಗೇರಿಗೆ ಹಿಂದಿರುಗಿದರು. ಇನ್ನೂ ಸ್ವಲ್ಪಕಾಲ ಅಲ್ಲಿದ್ದು ಅನಂತರ ತಮ್ಮ ಎರಡನೆಯ ದಿಗ್ವಿಜಯವನ್ನು ಆರಂಭಿಸಿದರು. ಶಂಕರರ ಮೊದಲ ದಿಗ್ವಿಜಯ ಬದರಿಯಿಂದ ಆರಂಭವಾಯಿತು. ಎರಡನೆಯ ದಿಗ್ವಿಜಯ ಶೃಂಗೇರಿಯಿಂದ ಆರಂಭವಾಯಿತು. ಶೃಂಗೇರಿಯಿಂದ ಹೊರಟ ಶಂಕರರು, ದೇಶವನ್ನೆಲ್ಲಾ ಸುತ್ತಿ ಧರ್ಮಜಾಗೃತಿಯನ್ನು ಮೂಡಿಸಿದರು. ಶೃಂಗೇರಿ, ಪುರೀ, ದ್ವಾರಕಾ ಮತ್ತು ಬದರೀನಾಥಗಳಲ್ಲಿ ಧರ್ಮಪ್ರಸಾರಕ್ಕಾಗಿ ಮಠಗಳನ್ನು ಸ್ಥಾಪಿಸಿದರು. ತಮ್ಮ ಶಿಷ್ಯಪ್ರಮುಖರನ್ನು ಅವುಗಳಲ್ಲಿ ಬಿಟ್ಟು ಕೆಲಸ ಮಾಡಲು ಸೂಕ್ತ ಆದೇಶವನ್ನಿತ್ತರು. ಶಂಕರರು ತಮ್ಮ ಸಂಚಾರದ ಕೊನೆಯಲ್ಲಿ ಕಾಶ್ಮೀರಕ್ಕೆ ಬಂದು ಸರ್ವಜ್ಞ ಪೀಠವನ್ನು ಅಲಂಕರಿಸಿದರು. ಅಲ್ಲಿಂದ ಕೇದಾರನಾಥಕ್ಕೆ ಬಂದರು. ಅಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಕಳೆದರು. ಹಿಮಾಲಯ ಪರ್ವತದಲ್ಲಿ ಗುಹಾಪ್ರವೇಶ ಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ತೋಟಕಾಚಾರ್ಯ

ಶಂಕರಾಚಾರ್ಯರ ನಾಲ್ಕು ಜನ ಮುಖ್ಯ ಶಿಷ್ಯರಲ್ಲಿ ಇಬ್ಬರು ಕನ್ನಡನಾಡಿನವರು. ಹಸ್ತಾಮಲಕರು ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಬಲಿಗ್ರಾಮದವರು. ಇನ್ನೊಬ್ಬ ಶಿಷ್ಯರಾದ ತೋಟಕರು ಶೃಂಗೇರಿಯವರೇ.

ತೋಟಕರ ಮೊದಲ ಹೆಸರು ಗಿರಿ. ಇವರು ತುಂಬಾ ಸಾಧು ಸ್ವಭಾವದವರು. ಹೆಚ್ಚಾಗಿ ಮಾತನ್ನೇ ಆಡುತ್ತಿರಲಿಲ್ಲ. ಸದಾ ಮೌನಿಯಾಗಿರುತ್ತಿದ್ದರು. ಶಂಕರರು ವೇದಾಂತಶಾಸ್ತ್ರ ಪ್ರವಚನ ಮಾಡುತ್ತಿದ್ದಾಗ ಉಳಿದ ಶಿಷ್ಯರು ತಮಗೆ ತೋರಿದ ಅನುಮಾನಗಳನ್ನೆಲ್ಲಾ ಶಂಕರರಿಗೆ ಹೇಳಿಕೊಳ್ಳು ತ್ತಿದ್ದರು. ತಮಗೆ ಅರ್ಥವಾಗದ ಕಷ್ಟವಾಗಿರುವ ಭಾಗ ಗಳನ್ನು ವಿವರಿಸುವಂತೆ ಕೇಳಿಕೊಳ್ಳುತ್ತಿದ್ದರು, ಮಧ್ಯದಲ್ಲಿ ಚರ್ಚೆ ಮಾಡುತ್ತಿದ್ದರು. ಗಿರಿಯವರು ಮಾತ್ರ ಯಾವ ಮಾತನ್ನೂ ಆಡದೆ ಮೌನವಾಗಿರುತ್ತಿದ್ದರು. ಪಾಠ ಅರ್ಥ ವಾಯಿತೋ ಇಲ್ಲವೋ ಎಂಬುದೇ ಗೊತ್ತಾಗುತ್ತಿರಲಿಲ್ಲ. ಗಿರಿಯವರ ಈ ಮೌನ, ವಿನಯ ಸ್ವಭಾವವನ್ನು ಕಂಡ ಇತರ ಶಿಷ್ಯರು ಗಿರಿಯವರನ್ನು ಮೂಢ, ಮಂಕ, ಬುದ್ಧಿ ಯಿಲ್ಲದ ದಡ್ಡ ಎಂದೆಲ್ಲಾ ಭಾವಿಸಿದ್ದರು. ಹಾಗೆಯೇ ಅವರನ್ನು ಹಾಸ್ಯ ಮಾಡುತ್ತಲೂ ಇದ್ದರು.

ಗಿರಿಯವರು ಮಾತನ್ನಾಡದೆ ಮೌನವಾಗಿರುತ್ತಿದ್ದು ದೇನೋ ನಿಜ. ಆದರೆ ಅವರ ಗುರುಭಕ್ತಿ ಮಾತ್ರ ನಿಸ್ಸೀಮ ವಾಗಿತ್ತು. ಗುರುಸೇವೆ ಮಾಡುವುದರಲ್ಲಿ ಅವರು ಎಲ್ಲರನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿೀರಿಸಿದ್ದರು. ಸದಾ ಗುರುವಿನ ಕೆಲಸಗಳಲ್ಲಿಯೇ ಇರುತ್ತಿದ್ದುದರಿಂದ, ಗಿರಿಯವರಿಗೆ ಪುಸ್ತಕ ಹಿಡಿಯಲು ಪುರುಸೊತ್ತೇ ಇರಲಿಲ್ಲ. ಶಂಕರರ ಸ್ನಾನಕ್ಕೆ ಸಿದ್ಧ ಮಾಡುವುದು, ಮಡಿಬಟ್ಟೆಗಳನ್ನ ಒಪ್ಪಿಸುವುದು, ಕೊಳೆ ಬಟ್ಟೆಗಳನ್ನು ಶುಚಿ ಮಾಡುವುದು, ಆಹ್ನಿಕಕ್ಕೆ ಅಣಿಮಾಡುವುದು, ಆಹಾರವನ್ನು ತಯಾರಿಸುವುದು, ಗ್ರಂಥರಚನೆಗೆ ಅಗತ್ಯವಾದ ತಾಳೇಗರಿ ಕಂಠ ಇವನ್ನು ತಂದಿಡುವುದು, ವಿಶ್ರಾಂತಿಗೆ ಕೃಷ್ಣಾಜಿನವನ್ನು ಹಾಸುವುದು ಹೀಗೆ ಪ್ರತಿಯೊಂದು ಕೆಲಸವನ್ನೂ ಗಿರಿಯವರೇ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಶಂಕರರಿಗೆ ಯಾವಾಗ ಏನೇನು ಅಗತ್ಯ ಎಂಬುದನ್ನು ಅರಿತಿದ್ದ ಗಿರಿಯವರು ಆಯಾ ಕಾಲಕ್ಕೆತಕ್ಕಂತೆ ಅಗತ್ಯವಾದ ಕೆಲಸವನ್ನು ಮಾಡಿಬಿಡುತ್ತಿದ್ದರು. ಪಾಠದ ಸಮಯದಲ್ಲಿ ಮೌನವಾಗಿ ಕುಳಿತು, ಪಾಠವನ್ನು ಕೇಳಿ ಮನಸ್ಸಿನಲ್ಲಿಯೇ ಮೆಲುಕು ಹಾಕುತ್ತಿದ್ದರು.

ಒಂದು ದಿನ ಗಿರಿಯವರು ತುಂಗಾನದಿಗೆ ಬಟ್ಟೆ ಒಗೆಯಲು ಹೋಗಿದ್ದರು. ಉಳಿದ ಶಿಷ್ಯರೆಲ್ಲಾ ಆಶ್ರಮದಲ್ಲಿ ಕುಳಿತು ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಸ್ವಲ್ಪ ಕಾಲಾನಂತರ ಶಂಕರರೂ ಬಂದರು. ಗಿರಿಯವರು ಇನ್ನೂ ಬಂದಿರಲಿಲ್ಲ. ಗಿರಿಯವರೂ ಬರಲೆಂದು ಶಂಕರರು ಪಾಠ ಪ್ರಾರಂಭಿಸದೆ ಕಾದಿದ್ದರು. ಆಗ ಪದ್ಮಪಾದರು "ಗುರುಗಳೇ ಸಿದ್ಧವಾಗಿದ್ದೇವೆ" ಎಂದು ವಿನಯದಿಂದ ನುಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಕರರು "ಗಿರಿಯೂ ಬರಲಿ" ಎಂದು ಮರುನುಡಿದರು. ತಕ್ಷಣವೇ ನಕ್ಕ ಪದ್ಮಪಾದರು "ಗುರುಗಳೇ, ಗೋಡೆಗೆ ಪಾಠ ಹೇಳುವುದೂ ಗಿರಿಗೆ ಪಾಠ ಹೇಳುವುದೂ ಒಂದೇ ಅಲ್ಲವೆ ?" ಎಂದುಬಿಟ್ಟರು. ಪದ್ಮಪಾದರ ಹಾಸ್ಯದ ಮಾತನ್ನು ಕೇಳಿ ಶಂಕರರು ಬೇಸರಗೊಂಡರು. ತಮ್ಮ ಮನಸ್ಸಿನಲ್ಲಿಯೇ ಗಿರಿಯವರನ್ನು ಹರಸಿದರು, ಅನುಗ್ರಹಿಸಿದರು.

ತುಂಗಾನದಿಯಿಂದ ಹಿಂದಿರುಗುತ್ತಾ ಇದ್ದ ಗಿರಿ ತಮ್ಮ ಗುರು ಶಂಕರರನ್ನು ಕುರಿತು ಸುಂದರವಾದ ಸ್ತೋತ್ರವನ್ನು ಹೇಳಿಕೊಳ್ಳುತ್ತಾ ಬಂದರು. ಅದರಲ್ಲಿ ಶಂಕರರು ಬೋಧಿಸುತ್ತಿದ್ದ ವೇದಾಂತ ತತ್ತ್ವ ಸರಳವಾಗಿ ಹೇಳಲ್ಪಟ್ಟಿತ್ತು. ಸ್ತೋತ್ರವನ್ನು ಕೇಳಿ ಶಿಷ್ಯರೆಲ್ಲಾ ಆಶ್ಚರ್ಯದಿಂದ ವಿಸ್ಮಿತರಾದರು. ನಾವು ಪೆದ್ದನೆಂದು ಭಾವಿಸಿದ್ದ ಗಿರಿಯವರು ಶ್ರೇಷ್ಠಜ್ಞಾನಿ ಎಂಬುದನ್ನು ಅರಿತರು. ತಮ್ಮ ತಪ್ಪು ನಡೆಗೂ ಮಾತಿಗೂ ನಾಚಿ ಗುರುಗಳ ಕ್ಷಮೆಯನ್ನು ಬೇಡಿದರು.

ಆಗ ಗಿರಿಯವರು ಹಾಡಿದ ಸ್ತೋತ್ರಕ್ಕೆ 'ಶ್ರುತಿಸಾರ ಸಮುದ್ಧರಣ' ಎಂದು ಹೆಸರು. ಅದನ್ನು ಹಾಡುವ ಧಾಟಿಯು (ಶೈಲಿ) ತೋಟಕ ವೃತ್ತದಲ್ಲಿ ಇತ್ತು. ಅದನ್ನು ಹಾಡಿದ ಗಿರಿಯವರಿಗೆ ತೋಟಕಾಚಾರ್ಯ ಎಂದೇ ಹೆಸರಾಯಿತು. ಈ ಶೃಂಗೇರಿಯ ಗಿರಿಯವರೇ ಮುಂದೆ ಬದರೀನಾಥದ ಜ್ಯೋತಿರ್ ಪೀಠಕ್ಕೆ ಮೊದಲ ಜಗದ್ಗುರುವಾಗಿ ನೇಮಿಸಲ್ಪಟ್ಟರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರಿಯ ದಕ್ಷಿಣಾಮ್ನಾಯ ಪೀಠ

ಶಂಕರರು ಹುಟ್ಟಿದುದು ಕೇರಳದ ಕಾಲಟಿಯಲ್ಲಿ–ನಂಬೂದರೀ ಬ್ರಾಹ್ಮಣವಂಶದಲ್ಲಿ. ಅವರ ಭಾಷೆ ಮಲೆಯಾಳ. ಆದರೆ ಶಂಕರರಿಗೆ ತಮ್ಮ ಪ್ರಾಂತ್ಯದಲ್ಲಿ, ತಮ್ಮ ಬಂಧುಗಳಲ್ಲಿ, ತಮ್ಮ ಭಾಷೆಯಲ್ಲಿ ಅಂಧವಾದ ಅಭಿಮಾನ ವಿರಲಿಲ್ಲ, ಇಡೀ ಭರತಖಂಡ ಅವರಿಗೆ ಸ್ವದೇಶವಾಗಿತ್ತು. ವೇದಶಾಸ್ತ್ರಗಳ ಭಾಷೆಯಾದ ಸಂಸ್ಕೃತವೇ ಶಂಕರರ ಸ್ವಭಾಷೆಯಾಗಿತ್ತು. ಸನಾತನ ಧರ್ಮೀಯರೆಲ್ಲರೂ ಅವರ ಸಬಾಂಧವರಾಗಿದ್ದರು.

ಇಂತಹ ಅತ್ಯುನ್ನತ ಭಾವನೆಗಳನ್ನು ಹೊಂದಿದ್ದ ಶಂಕರರು ಸತಾತನ ಹಿಂದೂ ಧರ್ಮದ ಪ್ರಸಾರಕ್ಕಾಗಿ ವೇದ ಶಾಸ್ತ್ರ ವಿದ್ಯೆಯ ಪ್ರಸಾರಕ್ಕಾಗಿ ಮಠಗಳನ್ನು ಸ್ಥಾಪಿಸಬೇಕೆಂದು ಯೋಚಿಸಿದರು. ಅವರು ಸ್ಥಾಪಿಸಿದ ಮಠಗಳಲ್ಲಿ ಮೊಟ್ಟಮೊದಲನೆಯ ಮಠವು ಶೃಂಗೇರಿಯ ಮಠ. ಇದಕ್ಕೆ ದಕ್ಷಿಣಾಮ್ನಾಯ ಪೀಠವೆಂದೂ ಹೆಸರು. ಆಮ್ನಾಯವೆಂದರೆ ವೇದ ಎಂದರ್ಥ. ನಾಲ್ಕು ವೇದಗಳಿಗೂ ನಾಲ್ಕು ಆಮ್ನಾಯ ಪೀಠಗಳು. ದಕ್ಷಿಣಾಮ್ನಾಯವೆಂದರೆ ಯಜುರ್ವೇದ. ಶೃಂಗೇರಿ ಪೀಠದಲ್ಲಿ ಯಜುರ್ವೇದದ ಅಧ್ಯಯನಕ್ಕೆ ಹೆಚ್ಚು ಪ್ರಾಶಸ್ತ್ಯ. ಇಲ್ಲಿಯ ಆರಾಧ್ಯದೇವಿ ಶ್ರೀ ಶಾರದೆಯಾದುದರಿಂದ ಇದಕ್ಕೆ ಶಾರದಾ ಪೀಠವೆಂದು ಹೆಸರಿದೆ.

ನೀವೆಲ್ಲಾ ಭೌತಶಾಸ್ತ್ರವನ್ನು ಸ್ವಲ್ಪಮಟ್ಟಿಗೆ ಓದಿದ್ದೀರಲ್ಲವೇ? ಅದರಲ್ಲಿ ಪದಾರ್ಥಗಳ ಗುಣವನ್ನು ಕುರಿತು,

Sri Vidyabharathi Book Centre, Sringeri

CC-O. In Public Domain. Digitized by eGangotri

ನೀರಿಗೆ ಹರಿಯುವುದು ಸ್ವಭಾವ, ಗಾಳಿಗೆ ಬೀಸುವುದು ಸ್ವಭಾವ ಎಂದು ಓದಿರಬೇಕು. ಹಾಗೆಯೇ ಬೆಂಕಿಗೆ ಸುಡುವ ಸ್ವಭಾವವೂ ಬೆಳಕನ್ನು ಬೀರುವ ಸ್ವಭಾವವೂ ಇದೆ. ಹೂವಿಗೆ ಕಂಪನ್ನು ಬೀರುವುದು ಸ್ವಭಾವ. ಸ್ವಭಾವ ಎಂದರೆ ಹುಟ್ಟು ವಾಗಲೇ ಇರುವ ಗುಣ. ಈ ಸ್ವಾಭಾವಿಕವಾದ ಗುಣವನ್ನೇ 'ಧರ್ಮ' ಎಂದು ಕರೆಯಬಹುದು. ಮಾನವರಿಗೂ ಸಹ ಸ್ವಾಭಾವಿಕವಾಗಿ ಇರುವ ಗುಣಗಳನ್ನು ಮಾನವ ಧರ್ಮ ಎನ್ನುತ್ತೇವೆ. ಸತ್ಯವಚನ, ಪ್ರಾಮಾಣಿಕತೆ, ಪರರಲ್ಲಿ ಪ್ರೀತಿ, ಕಷ್ಟದಲ್ಲಿರುವವರಿಗೆ ಅನುಕಂಪ, ಮೋಸಮಾಡ ದಿರುವುದು, ಕದಿಯದಿರುವುದು, ಸುಳ್ಳು ಹೇಳದೇ ಇರು ವುದು—ಹೀಗೆ ಮಾನವನು ಅನುಸರಿಸಬೇಕಾದ ಧರ್ಮ ವಿಶಾಲ ವಾಗಿದೆ. ಅವನು ಇದಕ್ಕೆ ತಪ್ಪಿ ನಡೆದರೆ ಅವನಿಗೆ ಅಪಾಯ ವಾಗುತ್ತದೆ ; ಹಾನಿಯಾಗುತ್ತದೆ. ಈ ಮಾನವ ಧರ್ಮ ವನ್ನು ಅನುಸರಿಸಿ ನಡೆಯುವಂತೆ ಶಂಕರರು ಬೋಧಿಸಿದರು. ಧರ್ಮವನ್ನು ಕಾಪಾಡಿಕೊಳ್ಳುವಂತೆ ಜನರಿಗೆ ಆಗಾಗ ಬೋಧನೆ ಮಾಡಲು, ಧರ್ಮದಿಂದ ತಪ್ಪಿ ನಡೆದವರನ್ನು ಪುನಃ ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಮಾಡುವುದು ಇವೇ ಶಂಕರರು ಸ್ಥಾಪಿಸಿದ ಮಠಗಳ ಉದ್ದೇಶ. ಈ ಮಠಗಳಿಗೆ ಚತುರಾಮ್ನಾಯ ಪೀಠಗಳೆಂದು ಹೆಸರು.

ಯಾಗಕುಂಡದಲ್ಲಿ ಯಾವಾಗಲೂ ಉರಿಯುತ್ತಿರುವ ಅಗ್ನಿಯೇ ವೇದಪುರುಷ. ಆತನ ಪೂರ್ವದಿಕ್ಕಿನಲ್ಲಿ ಋಗ್ವೇದ, ದಕ್ಷಿಣ ದಿಕ್ಕಿನಲ್ಲಿ ಯಜುರ್ವೇದ, ಪಶ್ಚಿಮದಲ್ಲಿ ಸಾಮವೇದ,

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ತರದಲ್ಲಿ ಅಥರ್ವಣವೇದವೂ ಇರುತ್ತದೆ. ಶಂಕರರು ಸ್ಥಾಪಿಸಿದ ಪೀಠಗಳೂ ಹೀಗೆಯೇ ಇವೆ. ಪೂರ್ವದಲ್ಲಿ ಪುರೀಪೀಠ, ಅಲ್ಲಿ ಋಗ್ವೇದದ ಅಧ್ಯಯನ; ದಕ್ಷಿಣದಲ್ಲಿ ಶೃಂಗೇರಿ ಪೀಠ, ಅಲ್ಲಿ ಯಜುರ್ವೇದ; ಪಶ್ಚಿಮದಲ್ಲಿ ದ್ವಾರಕಾಪೀಠ, ಅಲ್ಲಿ ಸಾಮವೇದ; ಉತ್ತರದ ಬದರೀ ಪೀಠದಲ್ಲಿ ಅಥರ್ವಣವೇದವೂ ಪ್ರಧಾನವಾಗಿ ಇವೆ. ಯಜ್ಞ ಕುಂಡದಲ್ಲಿ ಅಗ್ನಿಯಂತೆ ಪ್ರಜ್ವಲಿಸುವುದೇ ಸನಾತನ ವೈದಿಕ ಧರ್ಮ; ಅದನ್ನು ಪೋಷಣೆ ಮಾಡುವುದೇ ಈ ಚತುರಾಮ್ನಾಯ ಪೀಠಗಳ ಕೆಲಸ.

ಶಂಕರರು ಮೊದಲು ಸ್ಥಾಪಿಸಿದುದು ಶೃಂಗೇರಿಯ ಶಾರದಾ ಪೀಠ. ಅಲ್ಲಿ ತುಂಗಾ ತೀರದಲ್ಲಿ ಕಲ್ಲುಬಂಡೆಯ ಮೇಲೆ ಶ್ರೀಚಕ್ರವನ್ನು ಬರೆದು, ಶಂಕರರು ಪೂಜಿಸಿದರು. ಅಲ್ಲಿಯೇ ಶ್ರೀ ಶಾರದಾ ದೇವಿಯನ್ನು ಪ್ರತಿಷ್ಠೆ ಮಾಡಿದರು. ಪೀಠದ ರಕ್ಷಣೆಗಾಗಿ ಪೂರ್ವದಲ್ಲಿ ಕಾಲಭೈರವ, ದಕ್ಷಿಣದಲ್ಲಿ ದುರ್ಗಾ, ಪಶ್ಚಿಮದಲ್ಲಿ ಆಂಜನೇಯ, ಉತ್ತರದಲ್ಲಿ ಮಹಾ ಕಾಳಿಯನ್ನು ಪ್ರತಿಷ್ಠಿಸಿದರು. ಈ ದೇವಾಲಯಗಳಲ್ಲಿ ಪೂಜಾ ವ್ಯವಸ್ಥೆಯನ್ನು ಮಾಡಿದರು.

ಶ್ರೀ ಸುರೇಶ್ವರಾಚಾರ್ಯ

Sri Vidyabharathi Book Centre, Sringeri

ಶಂಕರರು ಶೃಂಗೇರಿ ಪೀಠದಲ್ಲಿ ಹತ್ತು ವರ್ಷ ಕಾಲಕ್ಕೂ

CC-O. In Public Domain. Digitized by eGangotri

ಹೆಚ್ಚಾಗಿ ತಾವೇ ಇದ್ದು, ಶಿಷ್ಯರಿಗೆ ಮಾರ್ಗದರ್ಶನ ಮಾಡಿದರು. ಅನಂತರ ಆ ಪೀಠಕ್ಕೆ ತಮ್ಮ ಶಿಷ್ಯರಲ್ಲಿ ಹಿರಿಯರಾಗಿದ್ದ ಸುರೇಶ್ವರಾಚಾರ್ಯರನ್ನು ಅಧಿಕಾರಿಯನ್ನಾಗಿ ನೇಮಿಸಿದರು.

ಸುರೇಶ್ವರರು ಮಾಹಿಷ್ಮತಿಯವರು. ಅವರ ಮೊದಲ ಹೆಸರು ವಿಶ್ವರೂಪ (ಮಂಡನಮಿಶ್ರ) ಎಂಬುದಾಗಿ. ಅವರು ತುಂಬಾ ದೊಡ್ಡ ವಿದ್ವಾಂಸರಾಗಿದ್ದರು. ಅನೇಕ ಜನ ಶಿಷ್ಯರನ್ನು ಹೊಂದಿದ್ದ ಅವರು ಕುಲಪತಿ ಎಂದು ಪ್ರಸಿದ್ಧರಾಗಿದ್ದರು. ವಿಶ್ವರೂಪರ ಪತ್ನಿಯೆ ಸರಸವಾಣಿ. ಆಕೆಯು ಉಭಯ ಭಾರತೀ ಎಂದೂ ಪ್ರಖ್ಯಾತೆಯಾಗಿದ್ದಳು. ಸರಸವಾಣಿಯು ವೇದಗಳ ಪೂರ್ವಭಾಗ ಮತ್ತು ಉತ್ತರಭಾಗಗಳೆರಡರಲ್ಲಿಯೂ ಪಾಂಡಿತ್ಯ ಪಡೆದಿದ್ದರಿಂದ ಈ ಉಭಯ ಭಾರತೀ ಎಂಬ ಹೆಸರನ್ನು ಪಡೆದಿದ್ದಳು.

ಶಂಕರರು ಬದರಿಯಿಂದ ದಕ್ಷಿಣದತ್ತ ಹೊರಟಾಗ ಪ್ರಯಾಣದಲ್ಲಿ ಅವರಿಗೆ ಕುಮಾರಿಲ ಭಟ್ಟರ ಭೇಟಿಯಾಗಿತ್ತು. ಅವರ ಅಪೇಕ್ಷೆಯಂತೆ ಶಂಕರರು ಮಾಹಿಷ್ಮತಿಗೆ ಬಂದು ವಿಶ್ವರೂಪರನ್ನು ಸಂಧಿಸಿದರು. ವಿಶ್ವರೂಪರಿಗೂ ಶಂಕರರಿಗೂ, ವೇದ ವೇದಾಂತ ಶಾಸ್ತ್ರಗಳ ಗುರಿಯೇನು ? ಎಂಬ ವಿಚಾರವಾಗಿ ಚರ್ಚೆ ನಡೆಯಿತು. ಹಲವು ದಿನಗಳ ಚರ್ಚೆಯಿಂದ ವಿಶ್ವರೂಪರಿಗೆ, ತಮ್ಮ ಅಭಿಪ್ರಾಯ ಸರಿಯಲ್ಲ ಎಂಬ ಭಾವನೆ ಸ್ಪಷ್ಟವಾಯಿತು. ಅವರು ಶಂಕರರ ಅಭಿಪ್ರಾಯವನ್ನು ಒಪ್ಪಿಕೊಂಡರು. ಶಂಕರರೊಡನೆ ವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದ ಸರಸವಾಣಿಯೂ ಶಂಕರರ ಅಭಿಪ್ರಾಯವನ್ನೇ ಒಪ್ಪಿಕೊಂಡಳು. ವಿಶ್ವರೂಪರು ಸನ್ಯಾಸ ಸ್ವೀಕರಿಸಿ, ಶಂಕರರ ಶಿಷ್ಯರಾದರು; ಸುರೇಶ್ವರಾಚಾರ್ಯರು ಎಂಬ ಹೆಸರು ಪಡೆದರು. ಸರಸವಾಣಿಯಾಗಿದ್ದ ಶಾರದೆಯು ಶೃಂಗೇರಿಯಲ್ಲಿ ತನ್ನ ನಿತ್ಯ ಸಾನ್ನಿಧ್ಯವಿರುವಂತೆ ಅನುಗ್ರಹಿಸಿದಳು.

ಸುರೇಶ್ವರರು ಶೃಂಗೇರಿ ಪೀಠದಲ್ಲಿ ಅನೇಕ ವರ್ಷಗಳ ಕಾಲ ತಪಸ್ಸು ಮಾಡಿದರು. ಸನ್ಯಾಸಿಗಳಿಗೂ, ಬ್ರಹ್ಮಚಾರಿಗಳಿಗೂ ಮಾರ್ಗದರ್ಶನ ನೀಡಿದರು. ಶ್ರೇಷ್ಠ ಜ್ಞಾನಿಯಾಗಿದ್ದ ಅವರು ಹಲವಾರು ಗ್ರಂಥಗಳನ್ನು ಬರೆದರು. ಅವುಗಳಲ್ಲಿ ನೈಷ್ಕರ್ಮ್ಯಸಿದ್ಧಿ, ಬೃಹದಾರಣ್ಯ ಭಾಷ್ಯವಾರ್ತಿಕ, ತೈತ್ತರೀಯ ಭಾಷ್ಯವಾರ್ತಿಕ ಇವು ಪ್ರಸಿದ್ಧವಾಗಿವೆ. ಶಂಕರರ ದಕ್ಷಿಣಾಮೂರ್ತಿ ಸ್ತೋತ್ರಕ್ಕೆ ಸುರೇಶ್ವರರು ಸುಂದರವಾದ ವಾರ್ತಿಕವನ್ನು ಬರೆದಿದ್ದಾರೆ. ಶಂಕರರಂತೆಯೇ ಸುರೇಶ್ವರರಿಗೂ ಬಹುಜನ ಶಿಷ್ಯರಿದ್ದರು.

ಸುಮಾರು ೭೨ ವರ್ಷಗಳ ಕಾಲ ಶೃಂಗೇರಿ ಪೀಠದಲ್ಲಿದ್ದ ಸುರೇಶ್ವರರು ತಮ್ಮ ಪೂರ್ಣ ವಯಸ್ಸಿನಲ್ಲಿ ಮುಕ್ತಿ ಹೊಂದಿದರು. ಅವರ ಸಮಾಧಿಯು ಶೃಂಗೇರಿಯಲ್ಲಿ ಶಾರದಾ ದೇವಾಲಯದ ಹತ್ತಿರವೇ ಇದೆ. ಇತ್ತೀಚೆಗೆ ಅಲ್ಲಿದ್ದ ಪುರಾತನ ಸಮಾಧಿ ದೇವಾಲಯವು ನವೀಕರಿಸಲ್ಪಟ್ಟಿದೆ. ಆ ಆಲಯದಲ್ಲಿ ಪ್ರಾಚೀನ ಶಿವಲಿಂಗದೊಡನೆ ಸುರೇಶ್ವರರ ಅಮೃತಶಿಲಾಮೂರ್ತಿಯೂ ಸ್ಥಾಪಿತವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುರೇಶ್ವರರ ನಂತರ ಹಲವಾರು ಜನ ತಪಸ್ವಿಗಳು ಶೃಂಗೇರಿ ಪೀಠದಲ್ಲಿ ಕುಳಿತು ಧರ್ಮ ಪ್ರಸಾರ ಮಾಡಿದರು. ಇವರಲ್ಲಿ ಅನೇಕ ಜನ ಪಂಡಿತರೂ ಬ್ರಹ್ಮಚಾರಿಗಳೂ ವಿದ್ಯಾರ್ಜನೆಗಾಗಿ ಬರುತ್ತಿದ್ದರು. ಆಧ್ಯಾತ್ಮಿಕ ಸಾಧನೆಯನ್ನು ಮಾಡುತ್ತಿದ್ದರು. ಈ ಆಚಾರ್ಯರ ಕಾಲದಲ್ಲಿ ಶೃಂಗೇರಿಯು ಪರ್ಣಕುಟಿಗಳ ಆಶ್ರಮವಾಗಿತ್ತು. ತುಂಗಾ ನದಿಯ ತೀರ ಕಾಲಭೈರವನ ಗುಡ್ಡ, ಮಲಹಾನಿಕರೇಶ್ವರ ಬೆಟ್ಟ, ಕಾಳಿಕಾ ದೇವಾಲಯದ ಗುಡ್ಡ, ವಸಿಷ್ಠಾಶ್ರಮ, ಕಿಗ್ಗ ಮುಂತಾದ ಸ್ಥಳಗಳಲ್ಲಿ ಅನೇಕರು ಆಶ್ರಮಗಳನ್ನು ಕಟ್ಟಿಕೊಂಡು ತಪಸ್ಸು ಮಾಡುತ್ತಿದ್ದರು.

ಶ್ರೀ ವಿದ್ಯಾತೀರ್ಥ

ನೀವು ನಮ್ಮ ದೇಶದ ಚರಿತ್ರೆಯನ್ನು ಓದಿದರೆ, ೧೩–೧೪ನೆಯ ಶತಮಾನಗಳಲ್ಲಿ ನಮ್ಮ ಭರತಖಂಡದ ಸ್ಥಿತಿ ಎಷ್ಟು ಕಷ್ಟದಲ್ಲಿತ್ತು ಎಂಬುದು ಅರ್ಥವಾಗುತ್ತದೆ. ಆ ಕಷ್ಟಕಾಲದಲ್ಲಿ ಅವತರಿಸಿ ದೇಶವನ್ನೂ ಧರ್ಮವನ್ನೂ ರಕ್ಷಿಸಲು ಸಂಕಲ್ಪ ಮಾಡಿದವರೇ ವಿದ್ಯಾತೀರ್ಥರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣರೇ ಇವರು. ಇವರಿಗೆ ವಿದ್ಯಾತೀರ್ಥರೆಂದೇ ಹೆಸರು. ಇವರ ಸಮಾಧಿ ಲಿಂಗಕ್ಕೆ ವಿದ್ಯಾಶಂಕರ ಎಂಬ ಹೆಸರು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾತೀರ್ಥರು ಕನ್ನಡನಾಡಿನವರೇ. ಶೃಂಗೇರಿಯಲ್ಲಿಯೇ ವಿದ್ಯಾಭ್ಯಾಸ ಮಾಡಿದರು. ಅನಂತರ ಭರತಖಂಡವನ್ನೆಲ್ಲಾ ಸಂಚರಿಸಿದರು. ಅವರಿಗೆ ದೇಶದ ದುಃಸ್ಥಿತಿಯು ಅರಿವಾಯಿತು. ಉತ್ತರ ಭಾರತವೆಲ್ಲಾ ಶತ್ರುಗಳ ವಶವಾಗಿತ್ತು. ದೇವಾಲಯ ಮಠ ಮಂದಿರಗಳೆಲ್ಲಾ ನಾಶವಾಗಿದ್ದವು. ಹಿಂದೂ ರಾಜರು ಪರಸ್ಪರ ಜಗಳಗಳಲ್ಲಿ, ದ್ವೇಷ ಅಸೂಯೆಗಳಲ್ಲಿ ಮಗ್ನರಾಗಿದ್ದರು. ಬಲಾತ್ಕಾರ ಮತಾಂತರ, ಕೊಲೆ, ಲೂಟಿ, ಸುಲಿಗೆ ಇವು ಆ ಕಾಲದಲ್ಲಿ ಸಾಮಾನ್ಯವಾಗಿಬಿಟ್ಟಿದ್ದವು.

ದೇಶಸಂಚಾರವನ್ನು ಮುಗಿಸಿ ವಿದ್ಯಾತೀರ್ಥರು ಶೃಂಗೇರಿಗೆ ಹಿಂದಿರುಗಿದರು. ತಮ್ಮ ಗುರು ನರಸಿಂಹತೀರ್ಥರಿಗೆ ದೇಶದ ಪರಿಸ್ಥಿತಿಯನ್ನು ವಿವರಿಸಿದರು. ಗುರುಗಳು ಎಲ್ಲವನ್ನೂ ಕೇಳಿ ದೇಶದ ದುಃಸ್ಥಿತಿಯನ್ನು ನಿವಾರಿಸಲು ಜನಗಳಲ್ಲಿ ಸ್ವಧರ್ಮದ ಅಭಿಮಾನವೂ, ಒಗ್ಗಟ್ಟೂ ಅಗತ್ಯವೆಂದರು. ನಿಸ್ವಾರ್ಥ ಪ್ರಯತ್ನದಿಂದ ದೇಶವನ್ನು ರಕ್ಷಿಸಬಹುದೆಂದು ನುಡಿದರು. ಮೇಲಾಗಿ ದೈವಾನುಗ್ರಹವನ್ನು ದೊರಕಿಸಿಕೊಳ್ಳಬೇಕೆಂದೂ, ಇದಕ್ಕಾಗಿ ತಪಸ್ಸು ಮಾಡಬೇಕೆಂದೂ ಸೂಚಿಸಿದರು.

ಗುರುಗಳ ಆದೇಶದಂತೆ ವಿದ್ಯಾತೀರ್ಥರು ಹಲವಾರು ವರ್ಷಗಳ ಕಾಲ ಉಗ್ರತಪಸ್ಸು ಮಾಡಿದರು. ಯೋಗಾಭ್ಯಾಸವನ್ನೂ ಮಾಡಿದರು. ಅನೇಕ ಜನ ಶಿಷ್ಯರು ಅವರಲ್ಲಿ ವಿದ್ಯಾಭ್ಯಾಸಕ್ಕಾಗಿ ಬಂದರು. ಅವರೆಲ್ಲರಲ್ಲಿಯೂ ಧರ್ಮಾಭಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾನವನ್ನು ದೇಶಾಭಿಮಾನವನ್ನೂ ತುಂಬಿದರು. ಸನಾತನ ಹಿಂದೂಧರ್ಮವನ್ನೂ, ಭಾರತ ದೇಶವನ್ನೂ ಶತ್ರುದಾಳಿ ಯಿಂದ ಉಳಿಸಲು ಎಲ್ಲ ತ್ಯಾಗಕ್ಕೂ ಸಿದ್ಧರಾದ ಶಿಷ್ಯರನ್ನು ತಯಾರಿಸಿ ಅವರಿಗೆ ಧರ್ಮ ಮತ್ತು ರಾಷ್ಟ್ರದ ಕಾರ್ಯವನ್ನು ಒಪ್ಪಿಸಿದರು.

ಆ ಶಿಷ್ಯರೇ ಭಾರತೀತೀರ್ಥ ಮತ್ತು ವಿದ್ಯಾರಣ್ಯರು. ಈ ಸನ್ಯಾಸಿಗಳ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ ಕ್ಷತ್ರಿಯ ವೀರರೇ ಹಕ್ಕ ಬುಕ್ಕರು. ತಮ್ಮ ಇಷ್ಟವನ್ನು ಈ ಶಿಷ್ಯರು ಈಡೇರಿಸುತ್ತಾರೆಂಬುದನ್ನು ವಿದ್ಯಾತೀರ್ಥರು ಮನಗಂಡರು. ತಾವು ಇನ್ನು ನಿಶ್ಚಿಂತೆಯಿಂದ ಯೋಗ ಮತ್ತು ತಪಸ್ಸುಗಳಲ್ಲಿ ಮಗ್ನರಾಗಬಹುದೆಂದು ನಿರ್ಧರಿಸಿ ದರು. ಅದರಂತೆಯೇ ಶೃಂಗೇರಿಯಲ್ಲಿ ತುಂಗಾನದಿಯ ಉತ್ತರಕ್ಕೆ ಭೂಗೃಹವೊಂದನ್ನು ಮಾಡಿಸಿದರು. ಶಿಷ್ಯರಿಗೆಲ್ಲಾ ಕೊನೆಯ ಉಪದೇಶವನ್ನು ನೀಡಿ ಆ ಭೂಗೃಹವನ್ನು ಪ್ರವೇಶಿಸಿದರು. ಹನ್ನೆರಡು ವರ್ಷ ಕಾಲ ಭೂಗೃಹದ ಬಾಗಿಲನ್ನು ಭದ್ರವಾಗಿ ಮುಚ್ಚಿಸಬೇಕೆಂದೂ ಅನಂತರ ತೆರೆದಾಗ ಅಲ್ಲಿ ಚತುರ್ವಿದ್ಯೇಶ್ವರ ಮೂರ್ತಿಯೆಂಬ ಲಿಂಗ ಕಾಣುವುದೆಂದೂ ತಿಳಿಸಿದ್ದರು.

ಆತುರಪಟ್ಟು ಭಕ್ತರಾರೋ ಮೂರು ವರ್ಷಗಳು ಕಳೆದ ನಂತರ ಭೂಗೃಹದ ಬಾಗಿಲನ್ನು ತೆರೆದರು. ಅಲ್ಲಿ ವಿದ್ಯಾತೀರ್ಥರು ಇರಲಿಲ್ಲ. ಒಂದು ಲಿಂಗ ಮಾತ್ರ ಇತ್ತು.
ಈ ವಿಚಾರವು ಆಗ ಶೃಂಗೇರಿಯ ಪೀಠಾಧಿಪರಾಗಿದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತೀತೀರ್ಥರಿಗೆ ತಿಳಿದು ಅವರು ತುಂಬಾ ಖತಿಗೊಂಡರು. ರಾತ್ರಿ ಅವರ ಕನಸಿನಲ್ಲಿ ವಿದ್ಯಾತೀರ್ಥರು ಕಾಣಿಸಿಕೊಂಡು, ನಡೆದು ಹೋದ ಆಕಾರ್ಯಕ್ಕೆ ಚಿಂತಿಸಬಾರದೆಂದೂ, ಲಿಂಗದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ದೇವಾಲಯವನ್ನು ಕಟ್ಟಿಸಬಹುದೆಂದೂ ಅಪ್ಪಣೆ ಯಿತ್ತರು. ಹಾಗೆ ನಿರ್ಮಿತವಾದುದೇ ವಿದ್ಯಾಶಂಕರ ದೇವಾಲಯ ; ಶಿಲ್ಪಕಲೆಗೂ ಪಾವಿತ್ರ್ಯಕ್ಕೂ ಹೆಸರಾದ ಮಂದಿರ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿದ್ಯಾರಣ್ಯ, ಭಾರತೀತೀರ್ಥ

ನಮ್ಮ ಭಾರತ ದೇಶದ ಉತ್ತರಕ್ಕೆ ಇರುವ ಹಿಮಾಲಯ ಪರ್ವತ ಎಷ್ಟು ಉನ್ನತವಾದುದೋ, ಅಷ್ಟೇ ಉನ್ನತವಾದುದು ವಿದ್ಯಾರಣ್ಯರವ್ಯಕ್ತಿತ್ವ. ವಿದ್ಯಾಪಾಂಡಿತ್ಯ, ದೇಶಭಕ್ತಿ, ಸಂಘಟನಾಶಕ್ತಿ, ರಾಷ್ಟ್ರ ನಿರ್ಮಾಣ ಸಾಮರ್ಥ್ಯ ಇವುಗಳಲ್ಲಿ ವಿದ್ಯಾರಣ್ಯರ ಸಮಕ್ಕೆ ಬರುವವರು ತುಂಬಾ ವಿರಳ. ಇಂತಹ ಮಹಾನುಭಾವರು ಭಾರತೀ ಕೃಷ್ಣತೀರ್ಥರ ನಂತರ ಶೃಂಗೇರಿಯ ಧರ್ಮರಾಜ್ಯಕ್ಕೆ ಒಡೆಯರಾಗಿದ್ದರು.

ಭಾರತೀತೀರ್ಥರೂ ವಿದ್ಯಾರಣ್ಯರೂ ಸನ್ಯಾಸಕ್ಕೆ ಮೊದಲು ಬಂಧುಗಳಾಗಿದ್ದವರು. ಇಬ್ಬರೂ ಬಾಲ್ಯವಿದ್ಯಾಭ್ಯಾಸವಾದ ಮೇಲೆ ಶ್ರೀಕಂಠನಾಥರೆಂಬುವರಲ್ಲಿ ಶಾಸ್ತ್ರ ವಿದ್ಯಾಭ್ಯಾಸ ಮಾಡಿದರು. ಅನಂತರ ದೇಶಸಂಚಾರ ಮಾಡಿದರು. ಈ ಯಾತ್ರೆಯು ಅವರ ಕಣ್ತೆರೆಸಿತು. ದೇಶದ ತುಂಬಾ ಅಶಾಂತಿ, ಭಯಭೀತಿಗಳು ಹರಡಿದ್ದವು. ಅನೈಕಮತ್ಯ ಮೂಡಿತ್ತು. ಈ ಪರಿಸ್ಥಿತಿಯನ್ನು ಹೇಗಾದರೂ ಸರಿಪಡಿಸಬೇಕು. ಶಾಂತಿಯನ್ನು ನೆಲೆಗೊಳಿಸಬೇಕು. ಶತ್ರುಭೀತಿಯನ್ನು ನಿವಾರಿಸಬೇಕು ಎಂದು ವಿದ್ಯಾರಣ್ಯರು ನಿರ್ಧರಿಸಿದರು. ಆದರೆ ಅದನ್ನು ಕಾರ್ಯಗತಗೊಳಿಸುವುದು ಹೇಗೆ ?

ಆ ಸಮಯದಲ್ಲಿ ಶೃಂಗೇರಿಯ ಗುರು ವಿದ್ಯಾತೀರ್ಥರು Sri Vidyabharathi Book Centre, Sringeri ತಪಸ್ಸನ್ನು ಮುಗಿಸಿ ಸರಿಯಾದ ಶಿಷ್ಯರು ದೊರಕುವರೇನೋ

CC-O. In Public Domain. Digitized by eGangotri

ಎಂದು ಕಾಯುತ್ತಿದ್ದರು. ವಿದ್ಯಾರಣ್ಯರೂ ಅವರ ಸೋದರರರೂ ಮಾರ್ಗ ತೋರುವ ಗುರುವನ್ನು ಹುಡುಕುತ್ತ ಶೃಂಗೇರಿಗೆ ಬಂದರು. ವಿದ್ಯಾತೀರ್ಥರನ್ನು ಸಂದರ್ಶಿಸಿದರು. ತಮ್ಮ ಅನುಭವವನ್ನೆಲ್ಲಾ ಹೇಳಿಕೊಂಡರು. ಗುರುಗಳ ಆದೇಶದಂತೆ ಸಹೋದರ ಬಂಧುಗಳಿಬ್ಬರೂ ಸನ್ಯಾಸ ದೀಕ್ಷೆಯನ್ನು ಪಡೆದರು. ಇವರಲ್ಲಿ ಕಿರಿಯವರು ಮೊದಲು ಸನ್ಯಾಸ ದೀಕ್ಷೆ ಪಡೆದು ಭಾರತೀತೀರ್ಥರಾದರು. ಇವರಿಗೆ ಭಾರತೀ ಕೃಷ್ಣತೀರ್ಥ ಎಂದೂ ಹೆಸರಿದೆ. ಹಿರಿಯವರು ಅನಂತರ ಸನ್ಯಾಸ ಪಡೆದು ವಿದ್ಯಾರಣ್ಯರಾದರು.

ಗುರುಗಳ ಅಪ್ಪಣೆಯಂತೆ ಭಾರತೀತೀರ್ಥರು ಶೃಂಗೇರಿಯಲ್ಲಿಯೂ ವಿದ್ಯಾರಣ್ಯರು ಹಂಪೆಯಲ್ಲಿಯೂ ನೆಲಸಿದರು. ಅವರು ಅಲ್ಲಿಯೇ ಇದ್ದು ಹಕ್ಕ ಬುಕ್ಕ ಮತ್ತು ಅವರ ಮೂವರು ಸೋದರರರಿಗೂ ರಾಜನೀತಿಯನ್ನು ಬೋಧಿಸಿದರು. ದೇಶವನ್ನೂ ಧರ್ಮವನ್ನೂ ಶತ್ರು ಕಾಟದಿಂದ ಉಳಿಸುವುದಕ್ಕಾಗಿ ಹಕ್ಕ ಬುಕ್ಕರಿಂದ ಪ್ರತಿಜ್ಞೆ ಮಾಡಿಸಿದರು. ಈ ವೀರ ಸೋದರರರಿಗೆ ಅನೇಕ ಜನನಾಯಕರ, ಪಾಳೆಯಗಾರರ ಸಹಕಾರವನ್ನು ದೊರಕಿಸಿಕೊಟ್ಟರು. ತಮಗೂ ತಮ್ಮ ಗುರುಗಳಿಗೂ ಶಿಷ್ಯರು ತಂದು ಒಪ್ಪಿಸಿದ್ದ ಐಶ್ವರ್ಯವನ್ನೆಲ್ಲಾ ರಾಜ್ಯ ನಿರ್ಮಾಣಕ್ಕಾಗಿ ಉಪಯೋಗಿಸಲು ಹಕ್ಕ ಬುಕ್ಕರಿಗೆ ಕೊಟ್ಟುಬಿಟ್ಟರು.

ವಿಜಯನಗರ ಸಾಮ್ರಾಜ್ಯ ನಿರ್ಮಾಣಕ್ಕೆ ಸಹಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದಂತೆಯೇ ವಿದ್ಯಾರಣ್ಯರು ರಾಜ್ಯದ ವಿಸ್ತರಣೆ, ಅದರ ಸಮರ್ಪಕವಾದ ಆಡಳಿತಕ್ಕೂ ಸಹಾಯ ಮಾಡಿದರು.

ಶೃಂಗೇರಿಯಲ್ಲಿಯೇ ಇದ್ದ ಭಾರತೀತೀರ್ಥರು ಅನೇಕ ಜನ ಪಂಡಿತರನ್ನು ಕರೆಸಿ ಉಪಯುಕ್ತವಾದ ಗ್ರಂಥಗಳನ್ನು ಬರೆಸಿದರು. ವೇದ ವೇದಾಂತ ಶಾಸ್ತ್ರಗಳಲ್ಲದೆ ಅರ್ಥಶಾಸ್ತ್ರ, ರಾಜನೀತಿ, ಧರ್ಮಶಾಸ್ತ್ರ, ಆಯುರ್ವೇದ, ಸಂಗೀತ, ಸಾಹಿತ್ಯ ಮುಂತಾದ ಅನೇಕ ವಿಷಯಗಳಲ್ಲಿ ಗ್ರಂಥಗಳು ರಚಿಸಲ್ಪಟ್ಟವು. ಇವೆಲ್ಲಕ್ಕೂ ವಿದ್ಯಾರಣ್ಯರ ಪ್ರೋತ್ಸಾಹ ವಿತ್ತು. ಶೃಂಗೇರಿಯ ಶಾರದಾ ದೇವಾಲಯದ ಮುಂಭಾಗ ದಲ್ಲಿ ನೂರಾರು ಜನ ಪಂಡಿತರು ಸಾಯಣಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತಿದ್ದರು. ವೇದಗಳ ಅರ್ಥವನ್ನು ನಿಷ್ಕರ್ಷಿಸುತ್ತಿದ್ದರು. ಹೀಗೆ ಅನೇಕ ವರ್ಷಗಳ ಕಾಲ ಪಂಡಿತರನ್ನೆಲ್ಲಾ ಕಲೆಹಾಕಿ ಅವರ ಸಹಾಯದಿಂದ ವೇದ ಭಾಷ್ಯವು ಬರೆಯಲ್ಪಟ್ಟಿತು. ಅದು ಬರೆಯಲ್ಪಟ್ಟಿದ್ದು ಶೃಂಗೇರಿಯಲ್ಲಿಯೇ.

ಶೃಂಗೇರಿಯ ಧರ್ಮಪೀಠದಲ್ಲಿ ಕುಳಿತು ವಿದ್ಯಾರಣ್ಯರು ಸರ್ವಮತೀಯರಲ್ಲಿಯೂ ಸೌಹಾರ್ದವೇರ್ಪಡಲು ಸಹಾಯ ಮಾಡಿದರು. ಆ ಕಾಲದಲ್ಲಿ ಶೈವರೂ ವೈಷ್ಣವರೂ ಶಾಕ್ತರೂ ನಾನು ಮೇಲು, ತಾನು ಮೇಲೆಂದು ಕಾದಾಡುತ್ತಿದ್ದರು. ಎಲ್ಲ ಮತಗಳ ಗುರಿಯೂ ಒಂದೇ, ಮಾರ್ಗ ಬೇರೆ ಎಂದು ಬೋಧಿಸಿದ ವಿದ್ಯಾರಣ್ಯರು ಎಲ್ಲ ಮತೀಯರನ್ನೂ ಒಂದೇ ರೀತಿಯಲ್ಲಿ ಕಾಣುವಂತೆ ವಿಜಯನಗರದ ದೊರೆಗಳಿಗೆ ಬೋಧಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದರು. ವಿಜಯನಗರದ ರಾಷ್ಟ್ರದೇವತೆ ಭುವನೇಶ್ವರಿ, ರಾಜಮುದ್ರೆಯಲ್ಲಿ ವೈಷ್ಣವರ ವರಾಹ, ರಾಜನ ಆಜ್ಞೆಗಳು ಹೊರಡುತ್ತಿದ್ದುದು ಶೈವರವಿರೂಪಾಕ್ಷ ಎಂಬ ಅಂಕಿತದಿಂದ.

ಪ್ರಾಚೀನ ಕಾಲದಿಂದ ಶೃಂಗೇರಿಯ ಪೀಠದಲ್ಲಿಯೂ ಇದೇ ವ್ಯವಸ್ಥೆಯಿತ್ತು. ಶೃಂಗೇರಿಯ ದೇವಿ ಶ್ರೀ ಶಾರದೆ. ಪೂಜಾ ಮೂರ್ತಿಗಳು ಶ್ರೀ ಚಂದ್ರಮೌಳೀಶ್ವರಲಿಂಗ ಮತ್ತು ಶ್ರೀ ನೃಸಿಂಹ ಸಾಲಿಗ್ರಾಮ. ಗುರುಗಳ ಆದೇಶವೆಲ್ಲವೂ ಹೊರಡುತ್ತಿದ್ದುದು 'ನಾರಾಯಣ ಸ್ಮರಣ' ಪೂರ್ವಕ. ವಿದ್ಯಾರಣ್ಯರ ಕಾಲದಲ್ಲಿ ಶೃಂಗೇರಿಯ ನಿರೂಪಗಳಿಗೆಲ್ಲಕ್ಕೂ ವಿದ್ಯಾಶಂಕರ ಎಂಬ ಅಂಕಿತವು ಆರಂಭವಾಯಿತು.

ವಿದ್ಯಾತೀಥ, ಭಾರತೀತೀರ್ಥ ಮತ್ತು ವಿದ್ಯಾರಣ್ಯರನ್ನು ವಿಜಯನಗರದ ದೊರೆಗಳು ತುಂಬಾ ಗೌರವದಿಂದ ಕಾಣುತ್ತಿದ್ದರು. ವಿದ್ಯಾರಣ್ಯರ ಹೆಸರಿನಲ್ಲಿ ಇಮ್ಮಡಿ ಹರಿಹರನು ವಿದ್ಯಾರಣ್ಯಪುರ ಅಗ್ರಹಾರವನ್ನು ನಿರ್ಮಿಸಿದನು. ಶೃಂಗೇರಿ ಗುರುಗಳು ವೈಷ್ಣವರಿಗೆ ವೈಷ್ಣವಧರ್ಮವನ್ನೂ ಶೈವರಿಗೆ ಶೈವಧರ್ಮವನ್ನೂ ಆಯಾ ಮತೀಯರಿಗೆ ಆಯಾ ಮತವನ್ನೇ ಬೋಧಿಸುತ್ತಿದ್ದುದರಿಂದ 'ಜಗದ್ಗುರು' ಎಂಬ ಅಭಿಧಾನವನ್ನು ಪಡೆದಿದ್ದರು. ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದುದರಿಂದ 'ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ' ಎಂದು ಗೌರವ ಪೂರ್ವಕವಾಗಿ ಕರೆಯಲ್ಪಟ್ಟರು. ಶೃಂಗೇರಿಯ ಮುಂದಿನ ಗುರುಗಳಿಗೂ ಈ ಅಭಿಧಾನವು ಮುಂದುವರೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾತ್ಮರ ಪರಂಪರೆ

ಶೃಂಗೇರಿಯು ಮಹಾತ್ಮರ ತವರೂರು, ಯೋಗಿಗಳ ನೆಲೆವೀಡು. ಋಷಿಗಳ ತಪೋಧಾಮ. ಶಂಕರರಿಂದ ಸ್ಥಾಪಿಸಲ್ಪಟ್ಟ ಶೃಂಗೇರಿ ಪೀಠದಲ್ಲಿ ಅನೇಕ ಜನ ಮಹಾಪುರುಷರೂ ತಪಸ್ವಿಗಳೂ ಬೆಳಗಿದರು. ಅವರೊಬ್ಬೊಬ್ಬರ ಚರಿತ್ರೆಯೂ ಸ್ವಾರಸ್ಯಕರವಾದುದು, ಬರೆಯಲ್ಪಡಬೇಕಾದುದು. ಅದೆಲ್ಲವನ್ನೂ ಹೇಳುತ್ತ ಹೋದರೆ ಅದೇ ದೊಡ್ಡ ಗ್ರಂಥವಾಗಿ ಬಿಡುತ್ತದೆ. ಆದ್ದರಿಂದ ಇತ್ತೀಚಿನ ಕೆಲವು ಗುರುಗಳ ಪರಿಚಯವನ್ನು ಮಾತ್ರ ಮಾಡಿಕೊಳ್ಳೋಣ.

32ನೆಯ ಗುರುಗಳಾದ ಸಪ್ತಮ ಶ್ರೀ ನರಸಿಂಹಭಾರತೀ ಸ್ವಾಮಿಗಳು ಮೈಸೂರಿನ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಸಮಕಾಲೀನರು. ಈ ಸ್ವಾಮಿಗಳು ತುಂಬಾ ದೊಡ್ಡ ಪಂಡಿತರಾಗಿದ್ದರು. ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಹಿಂದೂಸ್ತಾನಿ, ಮರಾಠಿ ಮುಂತಾದ ಹಲವು ಭಾಷೆಗಳನ್ನು ಬಲ್ಲವರಾಗಿದ್ದರು. ದೇಶವನ್ನೆಲ್ಲಾ ಹಲವಾರು ಸಲ ಸಂಚರಿಸಿದ್ದರು. ಜನಗಳ ಕಷ್ಟ, ರೋಗ, ದುಃಖ, ಚಿಂತೆ, ವ್ಯಸನಗಳನ್ನು ಪರಿಹರಿಸುವುದರಲ್ಲಿ ಸಹಾಯ ಮಾಡುತ್ತಿದ್ದರು. ಅನಾಚಾರ, ದುರಾಚಾರ, ಕಪಟ ವಂಚನೆಗಳನ್ನು ತೀವ್ರವಾಗಿ ಖಂಡಿಸುತ್ತಿದ್ದ ಈ ಸ್ವಾಮಿಗಳು ಜನಗಳ ನೈತಿಕ ಜೀವನವನ್ನು ಶುದ್ಧಗೊಳಿಸುವುದರಲ್ಲಿ ಆಸಕ್ತರಾಗಿದ್ದರು. ಸದಾ ಧ್ಯಾನ, ಪೂಜೆ, ಜಪ ತಪಸ್ಸುಗಳಲ್ಲಿಯೇ ಮಗ್ನರಾಗಿದ್ದ ಈ ಗುರುಗಳು ಹಸಿವನ್ನು ಮತ್ತು ನಿದ್ರೆಯನ್ನು ಗೆದ್ದಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇವರ ನಂತರ ಬಂದವರು ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಸ್ವಾಮಿಗಳವರು. ಇವರ ವಿಚಾರವನ್ನು ನೀವು ಈಗಾಗಲೇ ಓದಿರಬೇಕು. ಅತ್ಯಂತ ಸಣ್ಣ ವಯಸ್ಸಿನಲ್ಲಿಯೇ ಸನ್ಯಾಸಿಯಾದ ಇವರು, ಶಂಕರರ ಅವತಾರವೆಂದೇ ಭಾವಿಸಲ್ಪಟ್ಟಿದ್ದರು. ಶಂಕರರ ಜಯಂತಿಯನ್ನು ಆರಂಭಿಸಿದವರಲ್ಲಿ ಇವರೇ ಮೊದಲಿಗರು. ಶಂಕರರ ಜನ್ಮಸ್ಥಳವಾದ ಕಾಲಟಿಯನ್ನು ಕಂಡುಹಿಡಿದವರೂ ಇವರೇ. ಅಲ್ಲಿ ಶಾರದಾ ಶಂಕರರ ದೇವಾಲಯಗಳನ್ನು ಕಟ್ಟಿಸಿದರು. ಶಂಕರರ ಎಲ್ಲ ಗ್ರಂಥಗಳನ್ನು ಸಂಪಾದಿಸಿ ಪ್ರಕಟಣೆ ಮಾಡಿದರು. ಶೃಂಗೇರಿ, ಬೆಂಗಳೂರುಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಆರಂಭಿಸಿದರು. ಅನುಕಂಪ, ಕರುಣೆ, ದಯೆ ಇವು ಇವರ ವಿಶೇಷ ಗುಣಗಳಾಗಿದ್ದು, ಸಮಾಜದ ಎಲ್ಲಾ ವರ್ಗದವರೂ ಇವರ ಕೃಪೆಗೆ ಪಾತ್ರರಾಗಿದ್ದರು.

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ವಿಚಾರವನ್ನು ನೀವೆಲ್ಲರೂ ಬಲ್ಲಿರಿ. ಇವರು ಮಹಾಜ್ಞಾನಿಗಳೆಂದೂ ಅವಧೂತರೆಂದೂ ಪ್ರಸಿದ್ಧರಾಗಿದ್ದರು. ಬಾಲ್ಯದಲ್ಲಿಯೇ ಇವರ ಮನಸ್ಸು ದೇವರತ್ತ ಒಲಿದಿತ್ತು. ವಿನಯ, ಸೌಜನ್ಯ, ಗುರುಹಿರಿಯರಲ್ಲಿ ಭಕ್ತಿ ಇವು ಇವರ ಸ್ವಾಭಾವಿಕ ಗುಣಗಳಾಗಿದ್ದವು. ಬಾಲ್ಯದಲ್ಲಿಯೇ ಗುರುಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು. ಸನ್ಯಾಸ ದೀಕ್ಷೆ ಪಡೆದ ಮೇಲೆ ತಪಸ್ಸನ್ನೂ ಯೋಗಾಭ್ಯಾಸವನ್ನೂ ಮಾಡಿದರು. ಹೆಚ್ಚಾಗಿ ತಪಸ್ಸಿನಲ್ಲಿಯೇ ಇರುತ್ತಿದ್ದ ಇವರ ದರ್ಶನ ದೊರಕುವುದೇ

Sri Vidyabharathi Book Centre, Sringeri

 CC-O. In Public Domain. Digitized by eGangotri

ಅಪರೂಪವಾಗಿತ್ತು. ತಪಸ್ಸು ಹೆಚ್ಚಿದಂತೆಲ್ಲಾ ಏಕಾಂತವೂ ಹೆಚ್ಚುತ್ತಾ ಬಂದಿತ್ತು. ಅನೇಕ ಸಿದ್ಧಿಗಳನ್ನು ಪಡೆದ ಈ ಗುರುಗಳು ಅನೇಕ ಸಹಸ್ರ ಜನರನ್ನು ಅನುಗ್ರಹಿಸಿದ್ದರು. ಪ್ರತಿಯೊಬ್ಬನೂ ತನ್ನನ್ನು ತಾನು ತಿದ್ದಿಕೊಳ್ಳಬೇಕು, ಎಲ್ಲರನ್ನು ಒಟ್ಟಿಗೇ ಉದ್ಧಾರ ಮಾಡುತ್ತೇನೆಂದು ಹೊರಟರೆ ಆ ಪ್ರಯತ್ನ ವಿಫಲವಾಗುತ್ತದೆ. ಸಮಾಜದಲ್ಲಿರುವ ಪ್ರತಿ ವ್ಯಕ್ತಿಯೂ ಸರಿಯಾಗಿ ನಡೆದುಕೊಂಡರೆ, ಸಮಾಜ ತಾನೇ ಪರಿವರ್ತನ ಹೊಂದುತ್ತದೆ. ಸತ್ಯವಚನ, ಪ್ರಾಮಾಣಿಕತೆ, ಸಹಕಾರ, ಸಹಾನುಭೂತಿ, ಪ್ರೀತಿ, ವಿಶ್ವಾಸ ಇತ್ಯಾದಿ ಗುಣಗಳನ್ನು ಬೆಳೆಸಿಕೊಂಡರೆ ಸಮಾಜದ ಉದ್ಧಾರವಾಗುತ್ತದೆ, ಬರೀ ಘೋಷಣೆಗಳಿಂದ ಪ್ರಯೋಜನವಿಲ್ಲ – ಎಂದು ಈ ಗುರುಗಳು ಪದೇ ಪದೇ ಬೋಧಿಸುತ್ತಿದ್ದರು. ಈ ಗುರುಗಳು ಕಾಲಟಿಯಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದರು.

ಶೃಂಗೇರಿಯ ಪೀಠಕ್ಕೆ ಅನಂತರ ಬಂದವರೇ ಶ್ರೀ ಅಭಿನವ ವಿದ್ಯಾತೀರ್ಥಸ್ವಾಮಿಗಳು. ಅವರು ಬಾಲ್ಯದಲ್ಲಿಯೇ ಶೃಂಗೇರಿಗೆ ಬಂದು, ಸನ್ಯಾಸ ಸ್ವೀಕರಿಸಿದರು. ಗುರು ಚಂದ್ರಶೇಖರ ಭಾರತೀಯವರ ಮಾರ್ಗದರ್ಶನದಲ್ಲಿ ಶಾಸ್ತ್ರಾಭ್ಯಾಸವನ್ನೂ ಯೋಗಾಭ್ಯಾಸವನ್ನೂ ಮಾಡಿದರು. ಹಲವಾರು ಭಾಷೆಗಳನ್ನು ಬಲ್ಲ ಈ ಗುರುಗಳು ಭರತಖಂಡವನ್ನೆಲ್ಲಾ ಸಂಚರಿಸಿ ಜನಗಳಲ್ಲಿ ಧರ್ಮಜಾಗೃತಿಯನ್ನು ಮೂಡಿಸಿದರು. ನೇಪಾಳಕ್ಕೂ ಯಾತ್ರೆ ಬೆಳೆಸಿದ ಈ ಗುರು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು ಎಲ್ಲರಿಂದಲೂ ಗೌರವಿಸಲ್ಪಟ್ಟರು. ದೇಶದ ಬೇರೆ ಬೇರೆ ಕಡೆಗಳಲ್ಲಿ ಇರುವ ಜನರು ಪರಸ್ಪರ ಅರಿತುಕೊಂಡು, ನಾವೆಲ್ಲರೂ ಭಾರತೀಯರೆಂಬ ಭಾವನೆ ಬೆಳೆಸಿಕೊಂಡು ಸಂಯಮದಿಂದಿರಬೇಕೆಂದು ಬೋಧಿಸಿದರು. ಭರತ ಖಂಡದ ಯಾವ ಭಾಗದಲ್ಲಿಯೇ ಇರಲಿ, ಯಾವ ಭಾಷೆಯನ್ನೇ ಆಡಲಿ, ಯಾವ ಜಾತಿಯವರೇ ಆಗಲಿ, ಯಾವ ವೃತ್ತಿಯನ್ನೇ ಮಾಡಲಿ ನಾವೆಲ್ಲರೂ ಭಾರತೀಯರು; ಭಾರತೀಯ ಸಂಸ್ಕೃತಿಗೆ ಸೇರಿದವರು ಎಂಬುದನ್ನು ಈ ಗುರುಗಳು ಎಲ್ಲ ಸ್ಥಳಗಳಲ್ಲಿಯೂ ಬೋಧಿಸುತ್ತ ಜನಗಳಲ್ಲಿ ದೇಶಭಕ್ತಿಯನ್ನೂ ಸನಾತನ ಧರ್ಮದಲ್ಲಿ ಶ್ರದ್ಧೆಯನ್ನೂ ಮೂಡಿಸಿದರು.

ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಆನಂದ ಸಂವತ್ಸರದ ಆಶ್ವಯುಜ ಕೃಷ್ಣದ್ವಾದಶಿ ೧೧–೧೧–೧೯೭೪ ರಂದು ಶ್ರೀ ಸೀತಾರಾಮಾಂಜನೇಯುಲು ಎಂಬ ಯುವ ಬ್ರಹ್ಮಚಾರಿಗೆ ಸನ್ಯಾಸ ದೀಕ್ಷೆಯಿತ್ತು ಪೀಠಕ್ಕೆ ತಮ್ಮ ಉತ್ತರಾಧಿಕಾರಿಗಳನ್ನಾಗಿ ಆರಿಸಿದರು. ಶ್ರೀ ಭಾರತೀ ತೀರ್ಥರೆಂಬ ಅಭಿಧಾನದ ನೂತನ ಯತೀಂದ್ರರು ಸಕಲಶಾಸ್ತ್ರ ಪಾರಂಗತರೂ ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅದ್ವಿತೀಯವಾದ ಪಾಂಡಿತ್ಯವುಳ್ಳವರೂ ಕೃಪಾಶೀಲರೂ ಆಗಿದ್ದು ಸಮಸ್ತ ಭಕ್ತರಿಗೆ ಆರಾಧ್ಯರೂ ಮಾರ್ಗದರ್ಶಕರೂ ಆಗಿದ್ದಾರೆ.

ಶ್ರೀ ಸ್ವಾಮಿಗಳು ಬಾಲ್ಯದಲ್ಲಿಯೇ, ಶ್ರೀ ಅಭಿನವ ವಿದ್ಯಾತೀರ್ಥರನ್ನು ಆಶ್ರಯಿಸಿ, ವೇದಶಾಸ್ತ್ರಾಭ್ಯಾಸದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಭಾರತೀತೀರ್ಥರು

Sri Vidyabharathi Book Centre, Sringeri

 CC-O. In Public Domain. Digitized by eGangotri

ತೊಡಗಿ, ಪೂರ್ಣ ವಿದ್ವಾಂಸರಾದರು. ಯತ್ಯಾಶ್ರಮ ಸ್ವೀಕರಿಸಿದ ನಂತರ ಹದಿನೈದು ವರ್ಷಗಳ ಕಾಲ ತಮ್ಮ ಗುರುಗಳ ಸೇವೆ ಮಾಡುತ್ತ ಶ್ರೀ ಮಠದ ಆಡಳಿತದ ಬಗೆಗೂ ತಮ್ಮ ಲಕ್ಷೋಪಲಕ್ಷ ಶಿಷ್ಯರ ಧಾರ್ಮಿಕ, ಆಧ್ಯಾತ್ಮಿಕ ಅಭ್ಯುದಯದ ಬಗೆಗೂ ಗಮನವಿತ್ತರು. ನಿರ್ವಾಣ ಹೊಂದಿದ ಶ್ರೀ ಅಭಿನವ ವಿದ್ಯಾತೀರ್ಥರನ್ನು ಸರ್ವವಿಧದಲ್ಲಿಯೂ ಪ್ರತಿನಿಧಿಸುತ್ತಿರುವ ಈ ಗುರುಗಳು ದಕ್ಷಿಣಾಮ್ನಾಯ ಪೀಠದ ದಿವ್ಯಜ್ಯೋತಿಯಾಗಿದ್ದಾರೆ.

ಶೃಂಗೇರಿಯ ದೇವಾಲಯಗಳು

ಶೃಂಗೇರಿಯು ದೇವಾಲಯಗಳ ಊರು. ಇಲ್ಲಿ ನಲವತ್ತಕ್ಕೂ ಹೆಚ್ಚಾದ ದೇವಾಲಯಗಳಿವೆ. ಅವುಗಳಲ್ಲಿ ಕೆಲವು ಮುಖ್ಯ ದೇವಸ್ಥಾನಗಳನ್ನಾದರೂ ನಾವು ದರ್ಶನ ಮಾಡಬೇಕು.

ಊರಿನ ಮಧ್ಯದಲ್ಲಿರುವ ಮಲ್ಲಪ್ಪನ ಬೆಟ್ಟದಲ್ಲಿರುವ ಶ್ರೀ ಮಲಹಾನಿಕರೇಶ್ವರ ದೇವಾಲಯವು ಅತ್ಯಂತ ಪ್ರಾಚೀನವಾದುದು. ಸುಮಾರು ನೂರರಷ್ಟು ಮೆಟ್ಟಿಲುಗಳನ್ನು ಹತ್ತಬೇಕು. ಬೆಟ್ಟದ ನೆತ್ತಿಯಮೇಲೆ ಈ ಆಲಯವಿದೆ. ಇದು ದ್ರಾವಿಡ ಶೈಲಿಯ ದೇವಾಲಯ. ಶಿಥಿಲವಾಗಿದ್ದ ಈ ಆಲಯವು ಕೆಳದಿಯ ಅರಸರ ಕಾಲದಲ್ಲಿ ಪುನಃ ಕಟ್ಟಲ್ಪಟ್ಟಿತು. ಇಲ್ಲಿರುವ ಈಶ್ವರ ಲಿಂಗ ಭವ್ಯವಾದುದು. ಅದ

Sri Vidyabharathi Book Centre, Sringeri

CC-O. In Public Domain. Digitized by eGangotri



ಶ್ರೀ ಮಲಹಾನಿಕರೇಶ್ವರ ದೇವಾಲಯ

Sri Vidyabharathi Book Centre, Sringeri

CC-O. In Public Domain. Digitized by eGangotri

ರಲ್ಲಿಯೇ ವಿಭಾಂಡಕ ಮಹರ್ಷಿಗಳು ಐಕ್ಯರಾದುದು. ಈ ಲಿಂಗದ ಪೂಜೆಯಿಂದ ಕಾಲಕಾಲಕ್ಕೆ ಮಳೆಯೂ ಬೆಳೆಯೂ ಆಗುತ್ತದೆಂದು ಜನಗಳ ಶ್ರದ್ಧೆ. ಈ ಆಲಯದ ಎಡ ಮಗ್ಗುಲಿಗೆ ಶ್ರೀ ಭವಾನಿ ದೇವಿಯ ಆಲಯವಿದೆ. ಇದನ್ನು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು ನಿರ್ಮಿಸಿದರು. ಈ ದೇವಸ್ಥಾನದಲ್ಲಿ ಸ್ತಂಭ ಗಣಪತಿ ಎಂದು ಪ್ರಸಿದ್ಧವಾದ ವಿಘ್ನೇಶ್ವರ ಮೂರ್ತಿಯಿದೆ. ಶ್ರೀ ಅಭಿನವ ನರಸಿಂಹ ಭಾರತೀ ಸ್ವಾಮಿಗಳು ಅರಿಶಿನದ ಕೊನೆಯಿಂದ ಕಂಭದಮೇಲೆ ಬಿಡಿಸಿದ ವಿನಾಯಕನ ರೇಖಾ ಚಿತ್ರವು, ಈಗ ಸ್ಪಷ್ಟವಾಗಿ ಮೂಡಿ ಅಂದವಾದ ಗಣೇಶ ಮೂರ್ತಿಯಾಗಿದೆ. ಈ ದೇವಾಲಯವನ್ನು ಶ್ರೀ ಅಭಿನವ ವಿದ್ಯಾತೀರ್ಥರು ಇತ್ತೀಚೆಗೆ ನವೀಕರಣ ಮಾಡಿಸಿ ಕಟ್ಟಿಸಿದರು.

ಶ್ರೀ ಶಾರದಾ ದೇವಾಲಯವೂ ತುಂಬಾ ಪ್ರಾಚೀನವಾದುದು. ಈ ಆಲಯವು ಮೊದಲು ಸಾಮಾನ್ಯ ಕಟ್ಟಡವಾಗಿತ್ತು. ಹಲವಾರು ಸಲ ಶತ್ರು ದಾಳಿಗೆ ಸಿಕ್ಕಿತ್ತು. ವಿಜಯನಗರದ ಅರಸರೂ ಇಕ್ಕೇರಿಯ ನಾಯಕರೂ ಇದನ್ನು ಪದೇ ಪದೇ ಕಟ್ಟಿಸಿದ್ದರು. ಈ ಶತಮಾನದ ಆರಂಭದಲ್ಲಿ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳು ದ್ರಾವಿಡ ಶೈಲಿಯಲ್ಲಿ ಶಾರದಾ ದೇವಾಲಯವನ್ನು ಪುನಃ ಕಟ್ಟಿಸಿದರು. ದೇವಸ್ಥಾನವು ಕಗ್ಗಲ್ಲಿನಲ್ಲಿ ನಿರ್ಮಿತವಾಗಿದ್ದು ಗರ್ಭಗುಡಿಯು ಮಾತ್ರ ಕೃಷ್ಣಶಿಲೆಯಿಂದ ಕಟ್ಟಲ್ಪಟ್ಟಿದೆ. ಶ್ರೀ ಶಾರದಾ ವಿಗ್ರಹವಿರುವ ಸ್ಥಾನದಲ್ಲಿ ಮೊದಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಚಕ್ರ ಯಂತ್ರವಿತ್ತು. ಅನಂತರ ಗಂಧದ ಶಾರದಾ ವಿಗ್ರಹವು ಪ್ರತಿಷ್ಠಿಸಲ್ಪಟ್ಟಿತ್ತು. ಆ ವಿಗ್ರಹವು ಶತ್ರು ದಾಳಿಯಿಂದ ಭಿನ್ನವಾಗಿದ್ದುದರಿಂದ ಶ್ರೀ ವಿದ್ಯಾರಣ್ಯರು ಪಂಚಲೋಹದ ಮೂರ್ತಿಯನ್ನು ಪ್ರತಿಷ್ಠಿಸಿದರು. ಇದನ್ನು ಎಷ್ಟು ನೋಡಿದರೂ ತೃಪ್ತಿಯಾಗದು. ಇನ್ನೂ ನೋಡೋಣ, ದರ್ಶನ ಮಾಡೋಣ, ಎನ್ನಿಸುವಷ್ಟು ಮನೋಹರವಾಗಿದೆ ಜಗದಂಬೆ ಶ್ರೀ ಶಾರದೆಯ ವಿಗ್ರಹ. ಈ ಆಲಯಕ್ಕೆ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳು ಗೋಪುರವನ್ನು ಕಟ್ಟಿಸಿ ಪಂಚ ಕಲಶವನ್ನು ಸ್ಥಾಪಿಸಿರುತ್ತಾರೆ.

ಶೃಂಗೇರಿಯ ದೇವಾಲಯಗಳಲ್ಲೆಲ್ಲಾ ಶ್ರೀ ವಿದ್ಯಾಶಂಕರ ದೇವಾಲಯವು ಅತ್ಯಂತ ಭವ್ಯವಾದುದು. ಈ ದೇವಾಲಯವು ಸುಂದರವಾದ ರಥವನ್ನು ಹೋಲುತ್ತದೆ. ಕಾಡುಗಲ್ಲಿನಿಂದ ನಿರ್ಮಿತವಾದ ಈ ದೇವಾಲಯವು ಶಿಲ್ಪಕಲೆಗೂ ಪ್ರಸಿದ್ಧವಾಗಿದೆ. ವಿದ್ಯಾರಣ್ಯರ ಗುರುಗಳೂ ಕರ್ನಾಟಕ ಸಾಮ್ರಾಜ್ಯ ನಿರ್ಮಾಣಕ್ಕೆ ಪ್ರೇರಕರೂ ಆಗಿದ್ದ ಶ್ರೀ ವಿದ್ಯಾತೀರ್ಥ ಸ್ವಾಮಿಗಳ ಸಮಾಧಿಯ ಸುತ್ತ ಈ ದೇವಾಲಯ ನಿರ್ಮಿತವಾಗಿದೆ. ಇದು ದ್ರಾವಿಡ ಮತ್ತು ಹೊಯ್ಸಳ ವಾಸ್ತುಶಿಲ್ಪದ ಮಿಶ್ರಶೈಲಿಯೆಂದು ಶಿಲ್ಪ ಶಾಸ್ತ್ರಜ್ಞರು ಹೇಳುತ್ತಾರೆ. ಹೊರಗಡೆ ಪ್ರದಕ್ಷಿಣೆ ಮಾಡಲು ಜಗುಲಿಯಿದೆ. ಹೊರಗೋಡೆಯಲ್ಲಿ ಕೆಳಗಿನಿಂದ ಮೇಲಿನವರೆಗೆ ಸಪ್ತ ಲೋಕಗಳೆಂದು ಕರೆಯಲ್ಪಡುವ ಏಳು ಭಾಗಗಳಿವೆ. ಪ್ರತಿಯೊಂದು ಪಂಙ್ತಿಯೂ ವಿಧವಿಧವಾದ ಕೆತ್ತನೆ ಕೆಲಸ

Sri Vidyabharathi Book Centre, Sringeri

CC-O. In Public Domain. Digitized by eGangotri



ಮಲಹಾನಿಕರೇಶ್ವರ ಲಿಂಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾರದಾ ದೇವಾಲಯದ ಮುಖಮಂಟಪ

Sri Vidyabharathi Book Centre, Sringeri

CC-0. In Public Domain. Digitized by eGangotri



ವಿದ್ಯಾಶಂಕರ ದೇವಾಲಯದ ಪೂರ್ವ ದಿಕ್ಕಿನ ಮಹಾದ್ವಾರ

Sri Vidyabharathi Book Centre, Sringeri

CC-O. In Public Domain. Digitized by eGangotri



ವಿದ್ಯಾಶಂಕರ ದೇವಾಲಯದ ದಕ್ಷಿಣ ಪಾರ್ಶ್ವದ ನೋಟ

Sri Vidyabharathi Book Centre, Sringeri

CC-O. In Public Domain. Digitized by eGangotri



ಭಿತ್ತಿ ಚಿತ್ರ: ವಿದ್ಯಾಶಂಕರ ದೇವಾಲಯ

Sri Vidyabharathi Book Centre, Sringeri



ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತೀ ಮತ್ತು ಚಂದ್ರಶೇಖರಭಾರತೀ ಸ್ವಾಮಿಗಳವರ ಸಮಾಧಿಗಳುಳ್ಳ ಆಲಯ

CC-O. In Public Domain. Digitized by eGangotri
Sri Vidyabharathi Book Centre, Sringeri

CC-O. In Public Domain. Digitized by eGangotri



ಕಿಗ್ಗದ ಋಷ್ಯಶೃಂಗೇಶ್ವರ ದೇವಾಲಯದ ಮುಂಭಾಗ

Sri Vidyabharathi Book Centre, Sringeri

CC-O. In Public Domain. Digitized by eGangotri



ವಿದ್ಯಾಶಂಕರ ಮತ್ತು ಶಾರದಾಂಬಾ ದೇವಾಲಯಗಳು

Sri Vidyabharathi Book Centre, Sringeri

CC-O. In Public Domain. Digitized by eGangotri



ಚಂದ್ರಮೌಳೀಶ್ವರ ಪೂಜೆಯಲ್ಲಿರುವ ಗುರು ಶ್ರೀ ಅಭಿನವ ವಿದ್ಯಾತೀರ್ಥರು

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಂದ ಕೂಡಿದ್ದು ಆಕರ್ಷಕವಾಗಿದೆ. ಸುಮಾರು ನೂರಕ್ಕೂ ಹೆಚ್ಚಾದ ವಿಗ್ರಹಗಳು, ಪುರಾಣದ ದೃಶ್ಯಗಳೂ ಹೊರ ಗೋಡೆಯಲ್ಲಿ ಚಿತ್ರಿತವಾಗಿದೆ. ದೇವಸ್ಥಾನದ ಗೋಪುರವು ಚಿಕ್ಕದಾಗಿದ್ದು ಚಿನ್ನದ ಕಲಶವನ್ನು ಹೊಂದಿದೆ. ದೇವಾಲಯದ ಒಳಭಾಗದಲ್ಲಿ ಹನ್ನೆರಡು ಕಲ್ಲಿನ ಕಂಬಗಳನ್ನು ಉಳ್ಳ ಮಂಟಪವಿದೆ. ಒಂದೊಂದು ಕಂಬವೂ ಮೇಷ, ವೃಷಭ ಮುಂತಾದ ರಾಶಿಯ ಚಿಹ್ನೆಗಳಿಂದ ಗುರುತಿಸಲ್ಪಟ್ಟಿದೆ. ಸೂರ್ಯನು ಸಂಕ್ರಮಣದ ದಿನ ಯಾವ ರಾಶಿಯನ್ನು ಪ್ರವೇಶಿಸುತ್ತಾನೋ ಆ ರಾಶಿಯ ಕಂಬದ ಮೇಲೆ ಸೂರ್ಯನ ರಶ್ಮಿಗಳು ಬೀಳುತ್ತವೆ. ವಿದ್ಯಾಶಂಕರ ಲಿಂಗವು ಭವ್ಯವಾಗಿದ್ದು, ಭಕ್ತರ ಆಧ್ಯಾತ್ಮಿಕ ಅಪೇಕ್ಷೆಗಳನ್ನು ಪೂರೈಸುತ್ತದೆ. ಈ ಆಲಯದಲ್ಲಿ ಇರುವ ಶನಿದೇವರಿಗೆ ವಿಶೇಷ ಪೂಜೆಗಳು ಸಲ್ಲುತ್ತಿರುತ್ತವೆ.

ಈ ಪ್ರಮುಖ ದೇವಾಲಯಗಳಲ್ಲದೆ ಜನಾರ್ದನ ದೇವಾಲಯ, ಶಂಕರಾಚಾರ್ಯ ದೇವಾಲಯ, ಹರಿಹರ ದೇವಾಲಯ, ಸುರೇಶ್ವರಾಚಾರ್ಯ, ಸಚ್ಚಿದಾನಂದ ನರಸಿಂಹ ಭಾರತೀ ಮತ್ತು ಚಂದ್ರಶೇಖರ ಭಾರತೀಗಳವರ ಬೃಂದಾವನಗಳು ಸಂದರ್ಶಿಸಲೇಬೇಕಾದ ಗುಡಿಗಳು.

ಶೃಂಗೇರಿಗೆ ಐದು ಮೈಲಿ ಸಮೀಪದಲ್ಲಿರುವ ಕಿಗ್ಗದಲ್ಲಿ ಪ್ರಸಿದ್ಧವಾದ ಋಷ್ಯಶೃಂಗೇಶ್ವರ ದೇವಾಲಯವಿದೆ. ಇದು ದ್ರಾವಿಡ ಶೈಲಿಯ ಸುಂದರ ದೇವಾಲಯ. ಇಲ್ಲಿನ ಕೆತ್ತನೆಗಳಲ್ಲಿ ಪಲ್ಲಕ್ಕಿಯಲ್ಲಿ ಕುಳಿತ ಋಷ್ಯಶೃಂಗರನ್ನು ಶಾಂತೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಖಿಯರೇ ಒಯ್ಯುತ್ತಿರುವ ದೃಶ್ಯ ಗಮನಾರ್ಹವಾದುದು. ಋಷ್ಯಶೃಂಗೇಶ್ವರ ಲಿಂಗದ ತುದಿಯಲ್ಲಿ ಜಿಂಕೆಯ ಕೊಂಬನ್ನು ಹೋಲುವ ಸಂಕೇತವಿದೆ. ಈ ಲಿಂಗವನ್ನು ಭಕ್ತಿಯಿಂದ ಪೂಜೆ ಮಾಡಿದರೆ ಎಂತಹ ಕ್ಷಾಮವಾದರೂ ನಿವಾರಣೆಯಾ ಗುತ್ತದೆಂದು ನಂಬಿಕೆಯಿದೆ. ಮಲೆನಾಡಿನ ಎಲ್ಲ ಜಾತಿಯ ಜನರೂ ಈ ದೇವರಿಗೆ ಹರಕೆ ಹೊರುತ್ತಾರೆ.

ಶೃಂಗೇರಿಗೆ ದಕ್ಷಿಣದಲ್ಲಿ ವಿದ್ಯಾರಣ್ಯಪುರವೆಂಬ ಅಗ್ರ ಹಾರವಿದೆ. ಅಲ್ಲಿಯೂ ಹಲವಾರು ದೇವಾಲಯಗಳಿವೆ. ವಸಿಷ್ಠಾಶ್ರಮದಲ್ಲಿ ವಿದ್ಯಾತೀರ್ಥರ ವಿಗ್ರಹವಿರುವ ಆಲಯ ವಿದೆ. ಸಿಂಹಗಿರಿಯಲ್ಲಿ ಚತುರ್ವಿದ್ಯೇಶ್ವರ ಎಂಬ ಹೆಸರಿನ ಅಪೂರ್ವವಾದ ಲಿಂಗವಿದೆ. ಇಂತಹ ಲಿಂಗ ಬೇರೆಲ್ಲಿಯೂ ಇಲ್ಲ. ಈ ಲಿಂಗವು ಕಂಬದ ಆಕಾರದಲ್ಲಿದೆ. ಕಂಹದ ಪೂರ್ವ ಭಾಗದಲ್ಲಿ ವಿದ್ಯಾರಣ್ಯ ಮತ್ತು ಭಾರತೀ ತೀರ್ಥರೊಡನೆ ಶ್ರೀ ವಿದ್ಯಾತೀರ್ಥರ ಮೂರ್ತಿ ಕೆತ್ತಲ್ಪಟ್ಟಿದೆ. ಪ್ರಭಾವಳಿ ಯಲ್ಲಿ ಲಕ್ಷ್ಮೀನರಸಿಂಹ ವಿಗ್ರಹವಿದೆ. ಕಂಭದ ದಕ್ಷಿಣ ಭಾಗದಲ್ಲಿ ಸರಸ್ವತೀ, ಬ್ರಹ್ಮ; ಪಶ್ಚಿಮದಲ್ಲಿ ಪರವಾಸುದೇವ ವಿಷ್ಣು; ಉತ್ತರದಲ್ಲಿ ಪಂಚಮುಖನಾದ ಶಿವ; ಕಂಬದ ತುದಿಯಲ್ಲಿ ಪಾಣಿಪೀಠವೂ, ಲಿಂಗವೂ ಇವೆ. ಇದೊಂದು ಅಪೂರ್ವವಾದ ಲಿಂಗ.

ಶೃಂಗೇರಿಯ ಪೂರ್ವಕ್ಕೆ ಕಾಲಭೈರವ, ದಕ್ಷಿಣಕ್ಕೆ ದುರ್ಗೆ, ಪಶ್ಚಿಮಕ್ಕೆ ಆಂಜನೇಯ, ಉತ್ತರಕ್ಕೆ ಕಾಳಿಯ ದೇವಾಲಯಗಳಿವೆ. ಈ ದೇವತೆಗಳನ್ನು ಶಂಕರರೇ ಪ್ರತಿಷ್ಠಿ ಸಿದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಮ್ಮೆಯಾದರೂ ನೋಡಲೇಬೇಕು

ಶೃಂಗೇರಿಯು ಪ್ರತಿಯೊಬ್ಬ ಭಾರತೀಯನಿಗೂ ಪವಿತ್ರವಾದ ಸ್ಥಳ, ಕಾಶಿ, ರಾಮೇಶ್ವರ, ಪುರೀ, ದ್ವಾರಕಾ, ತಿರುಪತಿ, ಶ್ರೀಶೈಲ, ಶ್ರೀರಂಗ, ಫಂಡರೀಪುರ, ಬದರೀನಾಥ ಪಶುಪತಿನಾಥಗಳಂತೆ ಪಾವನತಮವಾದ ಕ್ಷೇತ್ರ ಶೃಂಗೇರಿ. ಸನಾತನ ಹಿಂದೂ ಧರ್ಮದ ಪುನರುಜ್ಜೀವನಕ್ಕೆ ಕಾರಣರಾದ ಮಹಾತ್ಮರ ನೆಲೆವೀಡು.

ಸದಾ ಹರಿಯುವ ತುಂಗಾನದಿ, ಸುತ್ತಲೂ ಇರುವ ಬೆಟ್ಟ ಗುಡ್ಡಗಳು, ಹಸಿರಿನಿಂದ ಕಂಗೊಳಿಸುವ ಅರಣ್ಯಗಳು, ಭವ್ಯವಾದ ಶಾರದಾ ಮಠ, ದೇವಾಲಯಗಳಲ್ಲಿ ನಡೆಯುವ ಪೂಜಾ ಕೈಂಕರ್ಯಗಳು, ಮಂದಸ್ಮಿತರಾಗಿ ಎಲ್ಲರನ್ನೂ ಹರಸುವ ಗುರುಗಳ ಸಾನ್ನಿಧ್ಯ-ಇವು ಒಂದೊಂದೂ ತುಂಬಾ ಆಕರ್ಷಕವಾಗಿವೆ.

ಶೃಂಗೇರಿಯಲ್ಲಿ ವರ್ಷವಿಡೀ ಯಾವುದಾದರೂ ಉತ್ಸವ ನಡೆಯುತ್ತಲೇ ಇರುತ್ತದೆ. ಶ್ರೀ ಶಂಕರರ ಜಯಂತೀ ಉತ್ಸವ, ಗಿರಿಜಾ ಕಲ್ಯಾಣ, ಗುರುಗಳು ನಡೆಸುವ ವ್ಯಾಸ ಪೂಜೆ, ಗಣಪತಿ ಉತ್ಸವ, ನವರಾತ್ರಿಯಲ್ಲಿ ಶಾರದೋತ್ಸವ, ಶಾರದಾ, ವಿದ್ಯಾಶಂಕರರ ಮತ್ತು ಮಲಹಾನಿಕರೇಶ್ವರ ರಥೋತ್ಸವಗಳು, ಗುರುಗಳ ಆರಾಧನೆ ಮತ್ತು ಜಯಂತಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿಯ ಪ್ರಮುಖ ಉತ್ಸವಗಳು. ನವರಾತ್ರಿಯಲ್ಲಿ ಶ್ರೀ ಶಾರದಾ ದೇವಿಗೆ ವಿಶೇಷ ಪೂಜೆಯೂ ಅಲಂಕಾರವೂ ನಡೆಯುತ್ತವೆ. ಈ ಉತ್ಸವ ಸಹಸ್ರಾರು ಜನರನ್ನು ಆಕರ್ಷಿಸುತ್ತದೆ. ಶಂಕರ ಜಯಂತಿ ಮತ್ತು ಗಣಪತಿ ಹಬ್ಬದ ಸಂದರ್ಭದಲ್ಲಿ ಜಗದ್ಗುರುಗಳ ಸಮ್ಮುಖದಲ್ಲಿ ವಿದ್ವಾಂಸರ ಸಭೆ ನಡೆಯುತ್ತದೆ. ಇದರಲ್ಲಿ ಭಾಗವಹಿಸುವ ಪಂಡಿತರೆಲ್ಲರಿಗೂ ಗುರುಗಳು ಪಾರಿತೋಷಕವನ್ನು ಕೊಡುತ್ತಾರೆ. ಈ ಸಭೆಯ ಕಾರ್ಯಕ್ರಮವೂ ನೋಡಲು ತುಂಬಾ ಚೆನ್ನಾಗಿರುತ್ತದೆ.

ಪ್ರತಿನಿತ್ಯವೂ ರಾತ್ರಿಯ ಕಾಲದಲ್ಲಿ ಗುರುಗಳೇ ಮಾಡುವ ಚಂದ್ರಮೌಳೀಶ್ವರ ಪೂಜೆ ಚಿತ್ತಾಕರ್ಷಕವಾಗಿರುತ್ತದೆ. ಪ್ರತಿ ಶುಕ್ರವಾರವೂ ರಾತ್ರಿಯ ಕಾಲದಲ್ಲಿ ಶ್ರೀ ಶಾರದಾದೇವಿಗೆ ಬೆಳ್ಳಿಯ ರಥದ ಉತ್ಸವ ನಡೆಯುತ್ತದೆ. ಇದೂ ಸಹ ನೋಡಲು ಬಲು ಚೆನ್ನು. ಸಂಸ್ಕೃತ ಪಾಠಶಾಲೆಯಲ್ಲಿ ನೂರಾರು ಜನ ವಿದ್ಯಾರ್ಥಿಗಳಿದ್ದು ಅಧ್ಯಯನ ಮಾಡುತ್ತಿರುತ್ತಾರೆ. ಮಠದ ಪುಸ್ತಕ ಭಂಡಾರವೂ ತುಂಬ ಅಮೂಲ್ಯವಾದುದು. ಆ ಧು ನಿ ಕ ವಿದ್ಯಾಭ್ಯಾಸವನ್ನು ನೀಡುವ ಶ್ರೀ ಚಂದ್ರಶೇಖರ ಭಾರತಿ ಕಾಲೇಜೂ ಒಳ್ಳೆಯ ಶಿಕ್ಷಣ ಕೇಂದ್ರ.

ಯಾತ್ರಿಕರಿಗೂ ಭಕ್ತರಿಗೂ ಪ್ರವಾಸಿಗಳಿಗೂ ಉಳಿದುಕೊಳ್ಳಲು ಛತ್ರಗಳೂ ಅತಿಥಿ ಮಂದಿರಗಳೂ ಇವೆ. ಮಠ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಭಕ್ತಾದಿಗಳಿಗೆ ಊಟದ ವ್ಯವಸ್ಥೆಯೂ ಇದೆ. ಬೆಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು, ಬೀರೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಸ್ಸುಗಳ ಮೂಲಕ ಶೃಂಗೇರಿಯನ್ನು ತಲುಪಬಹುದು. ರೈಲಿನಲ್ಲಿ ಬರುವವರು ಬೀರೂರು ಅಥವಾ ತರೀಕೆರೆಯಲ್ಲಿ ಇಳಿದು ಬಸ್ಸನ್ನು ಹತ್ತ ಬೇಕು. ಜೂನ್ ತಿಂಗಳಿಂದ ಅಕ್ಟೋಬರ್‌ವರೆಗೆ ಮಲೆನಾಡಿ ನಲ್ಲಿ ಮಳೆಯು ಹೊಡೆತವು ಜಾಸ್ತಿ. ಮೈಸೂರು ದೇಶದಲ್ಲಿ ಆಗುಂಬೆಯನ್ನು ಬಿಟ್ಟರೆ ಅತ್ಯಂತ ಹೆಚ್ಚು ಮಳೆ ಬೀಳುವುದು ಶೃಂಗೇರಿಯಲ್ಲಿಯೇ, ವಿಭಾಂಡಕ, ಋಷ್ಯಶೃಂಗ ಚಂದ್ರ ಮೌಳೀಶ್ವರರು ಅಭಿಷೇಕಪ್ರಿಯರಾದುದರಿಂದ ಇಲ್ಲಿ ಮಳೆ ಜಾಸ್ತಿ.

ನಮ್ಮ ಕರ್ನಾಟಕವಷ್ಟೇ ಅಲ್ಲ. ಭರತ ಖಂಡದಲ್ಲಿಯೇ ಶೃಂಗೇರಿಗೆ ಶ್ರೇಷ್ಠ ಸ್ಥಾನವಿದೆ. ಋಗ್ವೇದದ ಹತ್ತನೆಯ ಮಂಡಲದ ೧೩೬ನೆಯ ಸೂಕ್ತದ ೭ನೇ ಮಂತ್ರದ ದ್ರಷ್ಟಾರನಾದ ಋಷ್ಯಶೃಂಗರ ತಪೋಭೂಮಿ ಶೃಂಗೇರಿ. ಭರತ ಖಂಡದ ಧಾರ್ಮಿಕ ಇತಿಹಾಸದಲ್ಲಿ ಸೂರ್ಯನಂತೆ ಪ್ರಜ್ವಲಿಸುತ್ತಿರುವ ಶಂಕರರ ಕಾರ್ಯಕ್ಷೇತ್ರ ಶೃಂಗೇರಿ. ಸನಾತನ ಹಿಂದೂ ಧರ್ಮವು ಪರಕೀಯರ ದಾಳಿಗೆ ಸಿಕ್ಕಿದಾಗ ಅದನ್ನು ರಕ್ಷಿಸಲು ಹಿಂದೂ ಸಾಮ್ರಾಜ್ಯವನ್ನೇ ಸ್ಥಾಪಿಸಿದ ವಿದ್ಯಾತೀರ್ಥ, ವಿದ್ಯಾರಣ್ಯರ ನೆಲೆವೀಡು ಶೃಂಗೇರಿ. ಮಹಾತ್ಮರ, ತಪಸ್ವಿಗಳ, ಯೋಗಿಗಳ, ಜ್ಞಾನಿಗಳ

Sri Vidyabharathi Book Centre, Sringeri

CC-0. In Public Domain. Digitized by eGangotri

ಳವರೂರು. ಪ್ರತಿಯೊಬ್ಬ ಭಾರತೀಯನೂ ದರ್ಶನ ಮಾಡಲೇಬೇಕಾದ ಶ್ರೇಷ್ಠ ಕ್ಷೇತ್ರ ಶೃಂಗೇರಿ.

ಭಾರತದೇಶದ ದಕ್ಷಿಣ, ಪಶ್ಚಿಮ, ಉತ್ತರ, ಪೂರ್ವ ದಿಕ್ಕುಗಳಲ್ಲಿ ವ್ಯಾಪಿಸಿರುವ ಭಾರತೀಯ ಸಂಸ್ಕೃತಿಯ ಸಂಕೇತ ಶೃಂಗೇರಿ. ಎಲ್ಲ ಭಾರತೀಯರನ್ನೂ ಆಕರ್ಷಿಸುವ ಭಾವೈಕ್ಯತೆಯ ಸ್ಥಾನ - ಶೃಂಗೇರಿಗೆ ಹೋಗಿ ಬನ್ನಿ, ಶೃಂಗೇರಿಯನ್ನು ನೋಡ ಬನ್ನಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರು ಪರಂಪರೆ

1. ಶ್ರೀ ಶಂಕರ ಭಗವತ್ಪಾದ
2. ಶ್ರೀ ಸುರೇಶ್ವರಾಚಾರ್ಯ
3. ಶ್ರೀ ನಿತ್ಯಬೋಧಘನಾಚಾರ್ಯ
4. ಶ್ರೀ ಜ್ಞಾನಘನಾಚಾರ್ಯ
5. ಶ್ರೀ ಜ್ಞಾನೋತ್ತಮಾಚಾರ್ಯ
6. ಶ್ರೀ ಜ್ಞಾನಗಿರ್ಯಾಚಾರ್ಯ
7. ಶ್ರೀ ಸಿಂಹಗಿರ್ಯಾಚಾರ್ಯ
8. ಶ್ರೀ ಈಶ್ವರ ತೀರ್ಥ
9. ಶ್ರೀ ನರಸಿಂಹ ತೀರ್ಥ
10. ಶ್ರೀ ವಿದ್ಯಾಶಂಕರ ತೀರ್ಥ
11. ಶ್ರೀ ಭಾರತೀಕೃಷ್ಣ ತೀರ್ಥ
12. ಶ್ರೀ ವಿದ್ಯಾರಣ್ಯ
13. ಶ್ರೀ ಚಂದ್ರಶೇಖರ ಭಾರತಿ I
14. ಶ್ರೀ ನರಸಿಂಹ ಭಾರತಿ I
15. ಶ್ರೀ ಪುರುಷೋತ್ತಮ ಭಾರತಿ I
16. ಶ್ರೀ ಶಂಕರ ಭಾರತಿ
17. ಶ್ರೀ ಚಂದ್ರಶೇಖರ ಭಾರತಿ II
18. ಶ್ರೀ ನರಸಿಂಹ ಭಾ[illegible]
19. ಶ್ರೀ ಪುರುಷೋತ್ತಮ ಭಾರತಿ II
20. ಶ್ರೀ ರಾಮಚಂದ್ರ ಭಾರತಿ
21. ಶ್ರೀ ನರಸಿಂಹ ಭಾರತಿ III
22. ಶ್ರೀ ನರಸಿಂಹ ಭಾರತಿ IV
23. ಶ್ರೀ ನರಸಿಂಹ ಭಾರತಿ V
24. ಶ್ರೀ ಅಭಿನವ ನರಸಿಂಹ ಭಾರತಿ I
25. ಶ್ರೀ ಸಚ್ಚಿದಾನಂದ ಭಾರತಿ I
26. ಶ್ರೀ ನರಸಿಂಹ ಭಾರತಿ VI
27. ಶ್ರೀ ಸಚ್ಚಿದಾನಂದ ಭಾರತಿ II
28. ಶ್ರೀ ಅಭಿನವ ಸಚ್ಚಿದಾನಂದ ಭಾರತಿ
29. ಶ್ರೀ ನರಸಿಂಹ ಭಾರತಿ VII
30. ಶ್ರೀ ಸಚ್ಚಿದಾನಂದ ಭಾರತಿ III
31. ಶ್ರೀ ಅಭಿನವ ಸಚ್ಚಿದಾನಂದ ಭಾರತಿ II
32. ಶ್ರೀ ನರಸಿಂಹ ಭಾರತಿ VIII
33. ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತಿ
34. ಶ್ರೀ ಚಂದ್ರಶೇಖರ ಭಾರತಿ III
35. ಶ್ರೀ ಅಭಿನವ ವಿದ್ಯಾತೀರ್ಥ
36. ಶ್ರೀ ಭಾರತೀ ತೀರ್ಥ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri